# ನಾದನೂಪುರ ವಂಡಾರು

# Nadanoopura Vandaru


ಮುಖ್ಯಸ್ಥರು – ವಂಡಾರು ಗೋವಿಂದ
97418 47278
ಪ್ರಧಾನ ಸಂಪಾದಕರು – ಶುಭಾಶಯ
ಗೌರವ ಸಂಪಾದಕರು – ಅಜಿತ್ ಕಾರಂತ್
94496 86807



**Nadanoopura Yakshothana Trust (NYT) (R.)**
**Vandaru, Marvi, Vandaru village and Post,**
**Brahmavara Taluk, Udupi District – 576223**
**Email : nadanoopuravandaru@gmail.com**
**Website – https://nyt.1ngo.in/**





**ಮೂಡುಬಿದಿರೆ ಆಳ್ವಾಸ್ ಅಂತಾರಾಷ್ಟ್ರೀಯ ಜಂಬೂರಿಯಲ್ಲಿ ಪುಂಡುವೇಷ ವೈಭವ 2022**

ಪರಿವಿಡಿ


ಬೋರ್ಡ್ ರೂಮ್
ಸಂಪಾದಕೀಯ
ಯಕ್ಷಗಾನ ಸಾಹಿತ್ಯ ಸಮ್ಮೇಳನ – ಅನಿವಾರ್ಯ ಯಾಕೆ?
ಬಡಗಿನ ರಂಗದಲ್ಲಿ ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟಿ
ಶಿರೂರು ಫಣಿಯಪ್ಪಯ್ಯನವರ ಪ್ರಸಂಗ ಪ್ರದರ್ಶನ
ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ
ಕಾಡುವ ಪಾತ್ರ– 1 ಕೆಪಿ ಹೆಗಡೆ
2. ಚಿದಂಬರ ಬಾಬು
ನಮ್ಮ ಲೈಬ್ರರಿ – ಹಟ್ಟಿಯಂಗಡಿ ರಾಮಭಟ್ಟ – ಕವಿ, ಕೃತಿ ಪರಿಚಯ
ಕಲಾ ಕೈಂಕರ್ಯಕ್ಕೆ ಮಾದರಿ ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ




**ಗೋವಿಂದ ವಂಡಾರು**

## ಬೋರ್ಡ್ ರೂಂ

ನಮಸ್ಕಾರ ಓದುಗರೇ,

ಸರ್ವರಿಗೂ ನೂತನ ಕಾಲೆಂಡರ್ ವರ್ಷದ ಶುಭಾಶಯಗಳು.. ಜನವರಿ ತಿಂಗಳು ಅನೇಕರ ಜೀವನದಲ್ಲಿ ಅನೇಕ ಹೊಸತುಗಳಿಗೆ ನಾಂದಿಯಾಗುತ್ತದೆ. ಯಕ್ಷಗಾನದ ವಿಚಾರಕ್ಕೆ ಬರುವುದಾದರೆ ನವಂಬರ್ ತಿಂಗಳಿನಲ್ಲಿ ಪ್ರದರ್ಶನದ ಪ್ರವಾಸ ಹೊರಟ ಮೇಳಗಳು, ಪೌರಾಣಿಕ, ಕಾಲ್ಪನಿಕ ಪ್ರಸಂಗಗಳಿಗೆ ತಮ್ಮ ತಂಡವನ್ನು ಸಿದ್ಧ ಪಡಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಹೊಸ ಪ್ರಸಂಗಗಳ ವಿಚಾರ ಮಾತನಾಡುವುದಾದರೆ ಮೇಳದ ಮೊದಲ ಪ್ರಸಂಗದ ಸಿದ್ಧತೆಗೆ ವಿಶೇಷ ಆಸ್ಥೆ ತೋರಿಸಲಾಗುತ್ತದೆ. ತಂಡದ ಪ್ರತಿಯೊಬ್ಬರೂ ತಮ್ಮ ತಮ್ಮ ಪಾತ್ರಗಳ ಬಗ್ಗೆ ಸಂಪೂರ್ಣ ಶ್ರಮವಹಿಸಿ ತೊಡಗಿಸಿಕೊಳ್ಳುತ್ತಾರೆ. ಯಾಕೆಂದರೆ ಕಲಾವಿದನಿಗೆ ಆ ತಿರುಗಾಟ ಪೂರ್ತಿ ತಮ್ಮ ಪ್ರತಿಭೆಯನ್ನು ತೋರಿಸುವ ಅವಕಾಶ ಅದಾಗಿರುತ್ತದೆ. ಪ್ರಸಂಗಕರ್ತರು ಯಜಮಾನರು ಹಾಗೂ ಕಲಾವಿದರ ಸಂಘಟಿತ ಶ್ರಮದ ಫಲಿತಾಂಶ, ಕಥೆಯು ಕಲಾಸಕ್ತರ ಮನಗೆಲ್ಲುವಲ್ಲಿ ಎಷ್ಟು ಯಶಸ್ವಿಯಾಗಿದೆ, ಕಥೆಯ ಓಟ, ಗೆಲುವು ಎಲ್ಲ ಡಿಸೆಂಬರ್ ಕೊನೆಯಲ್ಲಿ ಒಂದು ರೂಪು ತಳೆದಿರುತ್ತದೆ. ಪ್ರಸಂಗ ಜನರಿಗೆ ಮೆಚ್ಚುಗೆಯಾಯಿತು, ಅತ್ಯುತ್ತಮ ಕಥೆ ಎಂಬ ಅಭಿಪ್ರಾಯ ಸಾರ್ವಜನಿಕರಲ್ಲಿ ಹರಿದಾಡಿದರೆ ಜನವರಿಯ ನಂತರವೂ ಅದೇ ಪ್ರಸಂಗದ ಪ್ರದರ್ಶನ ಮುಂದುವರೆಯುತ್ತದೆ. ಕಥೆ ಸಾಧಾರಣ ಮಟ್ಟದ್ದೆಂದು ಸಾರ್ವತ್ರಿಕ ಅಭಿಪ್ರಾಯಗಳು ವ್ಯಕ್ತವಾದಾಗ ಎರಡನೆ ಪ್ರಸಂಗ ಪ್ರದರ್ಶನಕ್ಕೆ ಜನವರಿ ತಿಂಗಳಲ್ಲಿ ಅವಕಾಶವಾಗುತ್ತದೆ. ಜನವರಿ ತಿಂಗಳು ಮೇಳದಲ್ಲಿ ಪ್ರಸಂಗ ಬದಲಾವಣೆಗೆ ನಾಂದಿಯೂ ಹೌದೆನ್ನಬಹುದು. ಪ್ರಸಂಗ ವಿಮರ್ಶೆಯ ಬಗ್ಗೆ ಹೇಳುವುದಾದರೆ ವಿಮರ್ಶೆ ಎಂಬುದು ಬಲಿಷ್ಠ ಮೇಳಗಳಿಗೆ ಮಾತ್ರ ಹೆಚ್ಚಾಗಿ ಸೀಮಿತವಾಗಿರುತ್ತದೆ. ಪ್ರತಿ ವರ್ಷವೂ ಹೆಚ್ಚು ಕಡಿಮೆ ೧೫–೨೦ ನೂತನ ಪ್ರಸಂಗಗಳು ವಿವಿಧ ಮೇಳಗಳಲ್ಲಿ ಪ್ರಯೋಗಗಳಾಗುತ್ತವೆ. ೨೦೨೨–೨೩ ನೇ ಸಾಲಿನ ನೂತನ ಪ್ರಸಂಗಗಳನ್ನು ಪಟ್ಟಿ ಮಾಡುವುದಾದರೆ, ಚಿತ್ರಾನಕ್ಷತ್ರ, ಪಾವನ ತುಳಸಿ, ಉಷಾರಾಗ, ರಕ್ತ ನೈವೇದ್ಯ, ರಸ ಪೌರ್ಣಮಿ, ಭುವನ ಭಾರತಿ, ಪಂಚಾಕ್ಷರಿ, ತೆಂಕುವಿನಲ್ಲಿ ಭಾಗ್ಯವಂತೆರ್, ಕೊಂಡೆಪೇರ್, ರಕ್ತೇಶ್ವರಿ ಮಹಿಮೆ, ಭಂಡಾರ ಚಾವಡಿ, ಅಂಬಾರಿ ನೀಲಾಂಬರಿ, ಶಿವ ಮೆಚ್ಚಿದ ಹಾಯ್ಗುಳಿ, ಬಳ್ಮನೆ ಕ್ಷೇತ್ರ ಮಹಾತ್ಮೆ, ನಾಗಸಂಜೀವನ, ಮಾತೆ ಜಗನ್ಮಾತೆ, ವಿಶ್ವ ವ್ಯಾಪಕ ನಾಮ ಶ್ರೀರಾಮ, ಗೆಜ್ಜೆಗಿರಿ ಕ್ಷೇತ್ರ ಮಹಾತ್ಮೆ, ಮಂತ್ರ ಮಾಂಗಲ್ಯ, ವಿಜಯ ವಿರಂಚಿ, ಕಟ್ಟೆದ ಗುರ್ಕಾರೆ, ಮಹಿಮೆದ ಮಾಣಿಕ್ಯ, ಭರತ ವರ್ಷಿಣಿ, ಶ್ರೀ ದೇವಿ ಚೌಡೇಶ್ವರಿ, ರಾಗರಂಜಿನಿ, ಕಾವ್ಯ ತರಂಗಿಣಿ, ಮಂತ್ರ ಮಾಂಗಲ್ಯ, ಪ್ರೇಮಾಭಿಷೇಕ, ಅಮೋಘ ಚಂದ್ರಿಕೆ, ತುಂಗ ತುಳಸಿ, ಪ್ರಸೀದ ಪರಮೇಶ್ವರಿ ಇನ್ನೂ ಅನೇಕ ಕೃತಿಗಳು ರಚಿತವಾಗಿದೆ. ಬಯಲಾಟ ಮೇಳಗಳಲ್ಲೂ ಸತ್ವಯುತ ಕಥೆಗಳು ಕೆಲವಾದರೂ ರಂಗಪ್ರಯೋಗವಾಗುವುದಿದೆ. ಬಯಲಾಟ ಮೇಳಗಳೆಂದರೆ ಭೂತ ಕೋಲಗಳ, ಅಣಿ ವೇಷಗಳ, ಬ್ಯಾಂಡ್ ವಾದ್ಯಗಳ ಗೌಜು, ಪೂರ್ವ ಸಿದ್ಧತೆಗೆ ಅಷ್ಟೊಂದು ಪ್ರಾಮುಖ್ಯತೆ ನೀಡುವುದಿಲ್ಲ ಎಂಬ ಅಭಿಪ್ರಾಯಗಳಿವೆ. ಬಯಲಾಟ ಮೇಳಗಳಲ್ಲಿ ಅದ್ಭುತ ಪ್ರತಿಭೆಗಳು ಇರುವುದಂತೂ ಸುಳ್ಳಲ್ಲ. ಅತ್ಯುತ್ತಮ ಸಂಯೋಜನೆಯ, ಪೂರ್ವ ಸಿದ್ಧತೆಯ ಕಥೆಗಳೂ ಜೀವಂತಿಕೆಯ ಸಾರ ಇರುವ ಪ್ರಸಂಗಗಳೂ ಬಯಲಾಟದಲ್ಲಿ ನಡೆಯುತ್ತವೆ. ಆದರೆ ಅದನ್ನು ಗುರುತಿಸುವವರೇ ಇಲ್ಲದಂತಿರುವ ಪರಿಸ್ಥಿತಿಯೇ ಹೆಚ್ಚು. ಈ ಹಿನ್ನಲೆಯಲ್ಲಿ ವಿಮರ್ಶಕರ ವಿಮರ್ಶಾ ವ್ಯಾಪ್ತಿ ಬಯಲಾಟ ಮೇಳಗಳಿಗೂ ವಿಸ್ತರಿಸಿದರೆ ಖಂಡಿತವಾಗಿ ಬೆಳೆಯುತ್ತಿರುವ ಪ್ರತಿಭೆಗಳಿಗೆ ಪ್ರೋತ್ಸಾಹ ಸಿಕ್ಕಂತಾಗುತ್ತದೆ. ಕಲಾವಿದನನ್ನು ವಿಮರ್ಶೆ ಯಾವ ರೀತಿ ಪ್ರೋತ್ಸಾಹಿಸುತ್ತದೆ ಎಂಬುದಕ್ಕೆ ನನ್ನ ಉದಾಹರಣೆಯೇ ಇದೆ.

ಸಾಲಿಗ್ರಾಮ ಮೇಳಕ್ಕೆ ಸೇರಿದ ಹೊಸದರಲ್ಲಿ ದೇವದಾಸ ಈಶ್ವರ ಮಂಗಲರ ಕಥೆ ಮತ್ತು ನಿರ್ದೇಶನದ ಅಗ್ನಿ ಚರಿತ್ರ ಪ್ರಸಂಗದ ನನ್ನ ಪವಿತ್ರ ಪಾತ್ರವನ್ನು ಜನ ಮೆಚ್ಚಿಕೊಂಡ ರೀತಿ ನಾನು ನೆನಪಿಸಿಕೊಳ್ಳಲೇಬೇಕು. ಅಂತಹದೇ ಪ್ರೋತ್ಸಾಹ ಬಯಲಾಟ ಮೇಳದ ಪ್ರಸಂಗ ಹಾಗೂ ಕಲಾವಿದರಿಗೂ ಸಿಕ್ಕರೆ ಅದೆಷ್ಟೋ ಪ್ರತಿಭೆಗಳು ಬೆಳಕಿಗೆ ಬರುತ್ತವೆ. ಬಯಲಾಟ ಮೇಳಗಳತ್ತವೂ ಕಲಾಭಿಮಾನಿಗಳು ಚಿತ್ತ ಹರಿಸಬಹುದು. ಬಯಲಾಟ ಮೇಳಗಳ ಕಲಾವಿದರ ಪರಿಶ್ರಮಕ್ಕೂ ಸಾರ್ಥಕತೆ. ಕೇವಲ ಕಾಲ್ಪನಿಕ ಪ್ರಸಂಗಗಳಷ್ಟೇ ಅಲ್ಲ, ಅದೆಷ್ಟೋ ಪೌರಾಣಿಕ ಪ್ರಸಂಗಗಳೂ ಬಯಲಾಟಗಳಲ್ಲಿ ಪ್ರಯೋಗಗಳಾಗುತ್ತವೆ. ಅಲ್ಲದೆ ಹಳೆಯ ಪೌರಾಣಿಕ ಪ್ರಸಂಗಗಳಾದರೂ ಪಾತ್ರ ಪೋಷಣೆ ಮಾಡುವ ರೀತಿಯೂ ಕಲಾವಿದನಿಂದ ಕಲಾವಿದನಿಗೆ ಭಿನ್ನವಾರುತ್ತದೆ. ಇದರ ವಿಮರ್ಶೆಯೂ ಯಕ್ಷಗಾನದ ಬೆಳವಣಿಗೆಯ ದೃಷ್ಟಿಯಿಂದ


ಒಳ್ಳೆಯದು. ಇನ್ನು ದೈವಾರಾಧನೆ ಈ ನೆಲದ ನಂಬಿಕೆಯಾಗಿರುವುದರಿಂದ ಆರಾಧನಾ ಕಲೆ ಯಕ್ಷಗಾನದಲ್ಲಿ ಬರಬಾರದೆನ್ನುವುದು ಎಷ್ಟರ ಮಟ್ಟರ ಮಟ್ಟಿಗೆ ಸರಿ ಎಂಬ ಪ್ರಶ್ನೆಯೂ ಇದೆ. ಇದರೊಂದಿಗೆ ಅಂತಹ ಪಾತ್ರಗಳು ಯಕ್ಷಗಾನ ರಂಗದಲ್ಲಿ ಹೇಗಿರಬೇಕು, ಅದರ ಮಿತಿ ಮೊದಲಾದ ವಿಷಯಗಳ ಬಗ್ಗೆಯೂ ಸದ್ವಿಮರ್ಶೆ ಆಗುವಂತಿರಬೇಕು. ಈ ದೃಷ್ಟಿಕೋನದಲ್ಲೂ ಆರೋಗ್ಯಕರ ವಿಮರ್ಶೆಗಳು ಮೂಡಿ ಬಂದರೆ ಅಂತಹ ಬರಹಗಳು ಮೌಲ್ಯಯುತ ದಾಖಲೆಯಾಗಿ ಉಳಿಯೋದ್ರಲ್ಲಿ ಅನುಮಾನವೇ ಇಲ್ಲ. ಅದರೊಂದಿಗೆ ಕಲೆ ಕಲಾವಿದರನ್ನು ತಿದ್ದಿ ಬೆಳೆಸುವಲ್ಲಿ ವಿಮರ್ಶಕರ ಪ್ರಯತ್ನ ಪ್ರಾಮಾಣಿಕವಾಗಿರಬೇಕೇ ಹೊರತು ಪೂರ್ವಾಗ್ರಹ ಪೀಡಿತ ಹಾಗೂ ಅಂಧಾಭಿಮಾನದ ವಿಮರ್ಶೆಗಳಾಗಿರಬಾರದು. ಈ ನಿಟ್ಟಿನಲ್ಲಿ ಇಂತಹ ಬರಹಗಳು, ಉತ್ತಮ ಬೆಳವಣಿಗೆಗಳು ಮೂಡಿ ಬರುವಂತೆ ನಿರೀಕ್ಷಿಸೋಣವೇ?

***ನಿಮ್ಮವನೇ, ಗೋವಿಂದ ವಂಡಾರು***

**ಸಂಪಾದಕೀಯ**

***ಆತ್ಮೀಯ ಓದುಗರೆ,***

ಸ್ಥಳೀಯವಾಗಿ ನಡೆಯೋ ಯಾವುದೇ ಕ್ಷೇತ್ರದ ಅಂತರಾಷ್ಟ್ರೀಯ ಸಮ್ಮೇಳನಗಳಲ್ಲಿ ಸ್ಥಳೀಯ ಕಲೆಗೆ ಮಾನ್ಯತೆ ದೊರಕೋ ಮೂಲಕ ಕಲೆಯ ಶ್ರೀಮಂತಿಕೆಯ ಪರಿಚಯ ಮತ್ತಷ್ಟು ವಿಸ್ತಾರವಾಗಿ ಹರಡಬಲ್ಲದು. ಅಂತಹ ಕಲೆ ಎಂದಿಗೂ ಅವಗಣನೆಗೆ ಒಳಗಾಗದು. ಬದಲಿಗೆ ಇನ್ನಷ್ಟು ಬೆಳಗುತ್ತದೆ. ಮೂಡುಬಿದಿರೆ ಆಳ್ವಾಸ್ ಕಾಲೇಜಿನಲ್ಲಿ ಏಳು ದಿನಗಳ ಕಾಲ ನಡೆದ ಅಂತರಾಷ್ಟ್ರೀಯ ಸೌಟ್ಸ್ ಅಂಡ್ ಗೈಡ್ಸ್ ಜಂಬೂರಿ – ೨೦೨೨ ಕಾರ್ಯಕ್ರಮದಲ್ಲಿ ಇತರ ಶಾಸ್ತ್ರೀಯ, ಜಾನಪದ ಕಲೆಗಳೊಂದಿಗೆ ತೆಂಕು ಬಡಗು ಯಕ್ಷಗಾನದ ಸೊಗಡು ಸರಣಿ ರೂಪದಲ್ಲಿ ಮೇಳೈವಿಸಿದ್ದು ಡಾ. ಮೋಹನ್ ಆಳ್ವರ ಸಾಂಸ್ಕೃತಿಕ ಪ್ರೇಮಕ್ಕೆ ಹಿಡಿದ ಕೈಗನ್ನಡಿ. ರಕ್ತಗತವಾಗಿಯೇ ಕಲಾಪ್ರೇಮಿಯಾಗಿರೋ ಮೋಹನ್ ಆಳ್ವರು ಎಲ್ಲಾ ಕಲೆಗಳನ್ನು ತನ್ನ ಕೇಂದ್ರದ ಮಡಿಲಿನಲ್ಲಿ ಹಿಂದಿನಿಂದಲೇ ಪೋಷಿಸಿಕೊಂಡು ಬಂದವರು. ಅದರಲ್ಲಿ ಯಕ್ಷಗಾನವೂ ಅವರ ಅವರ ಅಕ್ಕರೆಯ ಕಲೆ. ಅದು ಆಳ್ವಾಸ್ ವಿರಾಸ್ ಇರಲಿ, ನುಡಿಸಿರಿಯಾಗಿರಲಿ, ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದ ಯಾವುದೇ ಕಲೆಗಳು, ಕಲಾವಿದರು, ಆಳ್ವಾಸ್ ಕಾಲೇಜಿನಂಗಣಕ್ಕೆ ಬಂದರೂ ಎಲ್ಲರನ್ನೂ ಸ್ವಾಗತಿಸೋದು ಯಕ್ಷಗಾನದ ಬೊಂಬೆ. ಈ ಬಾರಿಯ ಅಂತರಾಷ್ಟ್ರೀಯ ಜಂಬೂರಿ ಕಾರ್ಯಕ್ರಮದಲ್ಲಿ ೭ ದಿನಗಳಲ್ಲಿ ವಿವಿಧ ವೇದಿಕೆಗಳಲ್ಲಿ ಯಕ್ಷಗಾನದ ವಿವಿಧ ಪ್ರಕಾರಗಳು ಅಂದರೆ, ವೃತ್ತಿಪರ ಮೇಳದ ಯಕ್ಷಗಾನ, ನಾಟ್ಯ ವೈಭವ, ಹಾಸ್ಯ ವೈಭವ, ತೆಂಕು ತಿಟ್ಟಿನ ಯಕ್ಷಗಾನ ಬಡಗು ತಿಟ್ಟಿನ ಯಕ್ಷಗಾನ, ಹವ್ಯಾಸಿ ತಂಡಗಳ ಯಕ್ಷಗಾನ, ಯುಗಳ ಯಕ್ಷ ಪ್ರಯೋಗ, ಮಕ್ಕಳ ಯಕ್ಷಗಾನ, ಕಲಿಕಾ ಕೇಂದ್ರದ ಯಕ್ಷಗಾನ, ಏಕ ವ್ಯಕ್ತಿ ಯಕ್ಷಗಾನ, ಯಕ್ಷಗಾನ ರಸಮಂಜರಿ, ಹೀಗೆ ವಿವಿಧ ರೂಪಗಳಲ್ಲಿ ಯಕ್ಷಗಾನ ಕಲೆಯನ್ನು ಪ್ರಸ್ತುತ ಪಡಿಸುವ ಪ್ರಯತ್ನ ಯಶಸ್ವಿಯಾಗಿ ನಡೆದಿದೆ. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಆಳ್ವಾರಿಂದ ಅನೇಕ ಪ್ರಯೋಗಾತ್ಮಕ ಅಧ್ಯಯನ ಗೋಷ್ಠಿಗಳು ನಡೆದಿವೆ. ಇಂತಹಾ ವೇದಿಕೆಗಳು, ಕೆಲ ಯಕ್ಷಗಾನ ಕೇಂದ್ರಗಳು, ಸಂಘಟಕರು, ಯಕ್ಷಗಾನಕ್ಕೆ ಸಂಬಂಧಿಸಿದಂತೆ ವಿವಿಧ ರೀತಿಯ ಪ್ರಯೋಗಗಳನ್ನು ನಡೆಸಿದ ಇತಿಹಾಸ ಇದೆ. ಯಕ್ಷಗಾನ ಸಮಗ್ರ ಅಧ್ಯಯನ ಹಾಗೂ ಮಥನಕ್ಕೆ ಇವೆಲ್ಲಾ ಪೂರ್ವವೇದಿಕೆಗಳೆಂದು ನಾವು ತಿಳಿಯಬಹುದು. ಬರುವ ತಿಂಗಳಲ್ಲಿ ಉಡುಪಿಯಲ್ಲಿ ಬೃಹತ್ ಮಟ್ಟದ ಯಕ್ಷಗಾನ ಸಾಹಿತ್ಯ ಸಮ್ಮೇಳನ ನಡೆಸುವ ಯೋಜನೆಗಳು ಕರ್ನಾಟಕ ಸರ್ಕಾರದಿಂದ ರೂಪುಗೊಳ್ಳುತ್ತಿದೆ. ಇಲ್ಲಿಯವರೆಗೆ ಸರ್ಕಾರದ ಮುಂದಾಳತ್ವದಲ್ಲಿ ಯಕ್ಷಗಾನಕ್ಕೆಂದು ಬೃಹತ್ ಸಮ್ಮೇಳನ ನಡೆದದ್ದು ಇಲ್ಲವಾದರೂ ಖಾಸಗಿ ಸಂಘ ಸಂಸ್ಥೆಗಳು ವಿವಿಧ ರೂಪಗಳಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿವೆ. ಈ ಎಲ್ಲಾ ಕಲಿಕೆಗಳನ್ನಿಟ್ಟುಕೊಂಡು ಮುಂದೆ ಉಡುಪಿಯಲ್ಲಿ ನಡೆಯುವ ಯಕ್ಷಗಾನ ಸಾಹಿತ್ಯ ಸಮ್ಮೇಳನವು, ಕಾಲಮಾನದ ಅಧ್ಯಯನ, ತೌಲನಿಕ ಅಧ್ಯಯನ, ಜಾನಪದ ನೆಲೆಗಟ್ಟಿನಲ್ಲಿ ಅಧ್ಯಯನ, ತೆಂಕು–ಬಡಗು ಸಾಮ್ಯತೆ ಭಿನ್ನತೆ, ಪ್ರಸಂಗ ಸಾಹಿತ್ಯಕ್ಕೆ ಮಾನ್ಯತೆ, ವಿಚಾರಗೋಷ್ಠಿ, ಮರೆಯಾದ ಪರಂಪರೆಗಳು, ಪೂರ್ವರಂಗದ ಅಧ್ಯಯನ ಮೊದಲಾದ ನೆಲೆಗಟ್ಟಿನಲ್ಲಿ ಚಿಂತನೆ ನಡೆಸುವಂತಾಗಲಿ. ಕಲಾವಿದರು, ಸಾಹಿತಿಗಳು, ಬರಹಗಾರರು, ವಿಮರ್ಶಕರು, ಯಕ್ಷಗಾನಾಸಕ್ತರ ಕೂಡುವಿಕೆಯಿಂದ ಒಂದಷ್ಟು ಹೊಸ ವಿಚಾರಗಳ ಹೊಳಹುಗಳಿಗೆ ಕಾರಣವಾಗಲಿ. ಕಲೆಯ ವಿವಿಧ ವಿಭಾಗಗಳನ್ನು ಒಟ್ಟುಗೂಡಿಸುವ, ಸಮಾಲೋಚನೆ ನಡೆಸಿ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವಂತೆ ಫಲಪ್ರದವಾಗಿ ಮೂಡಿ ಬರಲಿ ಎಂಬುದೇ ಆಶಯ.. – **ಶುಭಾಶಯ**




ಇತ್ತೀಚಿಗೆ ವಿಧಿವಶರಾದ ಖ್ಯಾತ ಯಕ್ಷಗಾನ ಕಲಾವಿದ, ಕುಂಬಳೆ ಸುಂದರ ರಾವ್ ಅವರ ಆತ್ಮವೃತ್ತಾಂತ 'ಯಕ್ಷಪಥದ ಯಾತ್ರಿಕ' ಪುಸ್ತಕ ರೂಪದಲ್ಲಿ ಡಿಸೆಂಬರ್ ೩೧ ರಂದು ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನ ಎಲ್.ಸಿ.ಆರ್.ಐ ಸಭಾಂಗಣದಲ್ಲಿ ಸಂಜೆ ೪ ಘಂಟೆಗೆ ಅನಾವರಣಗೊಳ್ಳಲಿದೆ. ಈ ಆತ್ಮಕಥೆಯನ್ನು ಹಿರಿಯ ಯಕ್ಷಗಾನ ಕಲಾವಿದರಾದ ಶ್ರೀ ಕೆ. ಗೋವಿಂದ ಭಟ್ ಲೋಕಾರ್ಪಣೆಗೊಳಿಸಲಿದ್ದಾರೆ. ಈ ಕಾರ್ಯಕ್ರಮವನ್ನು ಸಂತ ಅಲೋಶಿಯಸ್ ಕಾಲೇಜಿನ ಕನ್ನಡ ವಿಭಾಗ, ರಂಗಸಂಗಾತಿ ಸಾಂಸ್ಕೃತಿಕ ಪ್ರತಿಷ್ಠಾನ ಮಂಗಳೂರು ಮತ್ತು ಕರ್ನಾಟಕ ಸಾಹಿತ್ಯ ಪರಿಷತ್ತು ಬೆಂಗಳೂರು ಇವುಗಳ ಸಹಯೋಗದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ಸಂತ ಅಲೋಶಿಯಸ್ ಕಾಲೇಜಿನ ರೆಕ್ಟರ್ ರೆ.ಫಾ ಮೆಲ್ವಿನ್ ಜೆ.ಪಿಂಟೋ, ಪ್ರೊ| ಬಿ.ಎ ವಿವೇಕ ರೈ ಮತ್ತು ಡಾ. ಎಂ. ಪ್ರಭಾಕರ ಜೋಶಿ, 'ಯಕ್ಷಪಥದ ಯಾತ್ರಿಕ'ದ ಸಂಪಾದಕರೂ, ಸಂತ ಅಲೋಶಿಯಸ್ ಕಾಲೇಜಿನ ನಿವೃತ್ತ ಕನ್ನಡ ಪ್ರೊಫೆಸರ್ ಡಾ. ನಾ. ದಾಮೋದರ ಶೆಟ್ಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ನಂತರ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ 'ಕೃಷ್ಣ ಸಂಧಾನ' ತಾಳಮದ್ದಳೆ ಕಾರ್ಯಕ್ರಮ ನಡೆಯಲಿದೆ.


**ನಾದ ನೂಪುರ ಡಿಜಿಟಲ್ ಯಕ್ಷ ಪತ್ರಿಕಾ ಬಳಗ**

**ವಂಡಾರು ಗೋವಿಂದ | ಶುಭಾಶಯ | ಅಜಿತ್ ಕಾರಂತ್ | ಪ್ರೊ. ಉದಯ್ ಕುಮಾರ್ ಶೆಟ್ಟಿ | ರವಿ ಮಡೋಡಿ | ಎಂ ಶಾಂತಾರಾಮ್ ಕುಡ್ವ | ಸಾಯಿಸುಮ ಎಂ ನಾವಡ | ಉಮೇಶ್ ಶಿರೂರ್**

**ನ್ಯೂಸ್ ಲೆಟರ್ ವಿನ್ಯಾಸ – ಶುಭಾಶಯ**

# ಯಕ್ಷಗಾನ ಸಾಹಿತ್ಯ ಸಮ್ಮೇಳನ – ಅನಿವಾರ್ಯ ಏಕೆ??

**ಕೊ**ರೋನಾದಿಂದಾಗಿ ಹಿಂಜರಿತ ಕಂಡ ಯಕ್ಷಗಾನಕ್ಕೆ ಕರ್ನಾಟಕ ಸರಕಾರವು, ಇತ್ತೀಚೆಗೆ ಹಲವಾರು ಸೌಲಭ್ಯಗಳನ್ನು ನೀಡಿದೆ. ಯಕ್ಷಗಾನ ಕಲೆಗೆ ನೇರ ಸಂಬಂಧಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ, ಶ್ರೀ ಸುನೀಲ್ ಕುಮಾರ್ ರವರು ಯಕ್ಷಗಾನದ ಜಿಲ್ಲೆಯವರೇ, ಕಾರ್ಕಳದವರೇ ಆಗಿರುವ ಕಾರಣ ಇದೇ ಫೆಬ್ರವರಿ 11, 12ರಂದು ಉಡುಪಿಯಲ್ಲಿ ಕರ್ನಾಟಕ ಮಟ್ಟದ "ಯಕ್ಷಗಾನ ಸಾಹಿತ್ಯ ಸಮ್ಮೇಳನ" ಹಮ್ಮಿಕೊಂಡಿರುವುದು ಸಂತಸದ ವಿಷಯ. ಸರಕಾರವು ಯಕ್ಷಗಾನವನ್ನು ಕಡೆಗಣಿಸುತ್ತಿದೆ ಎಂಬ ಕೆಲವರ ಅಸಮಾಧಾನ ಇದೀಗ ಶಮನಗೊಳ್ಳಬಹುದು. ಈ ಯಕ್ಷಗಾನ ಸಮ್ಮೇಳನದಲ್ಲಿ ಯಕ್ಷಗಾನದ ಕುರಿತಾದ ಸಮಗ್ರ ಚಿಂತನೆ, ಗೋಷ್ಠಿ, ಕಮ್ಮಟಗಳು, ಪ್ರದರ್ಶನ, ಚಿಂತಕರ ಹಾಗೂ ವಿಮರ್ಶಕರ ಭಾಷಣ, ಚರ್ಚೆ, ಸಂವಾದ, ಸಂಪನ್ಮೂಲ ವ್ಯಕ್ತಿಗಳ ಅಭಿಪ್ರಾಯ ಕ್ರೋಢೀಕರಣ ಮುಂತಾದವು ಜರುಗಲಿವೆ ಎಂದು ಸರಕಾರದ ಪತ್ರಿಕಾ ಪ್ರಕಟಣೆಯ ಸಾರಾಂಶ. ಇದು ಸರಕಾರದಿಂದಲೇ ಜರುಗುವ ಪ್ರಥಮ ಯಕ್ಷಗಾನ ಸಾಹಿತ್ಯ ಸಮ್ಮೇಳನ. ಇದನ್ನು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಮದಂಡಿಯಾಗಿ ನೆರವೇರಿಸುವ ಉದ್ದೇಶ ಸುನೀಲ್ ಕುಮಾರ್ ರದ್ದಾಗಿದೆ. ಇದೊಂದು ಯಕ್ಷಗಾನದ ಬೆಳವಣಿಗೆಯ ದೃಷ್ಟಿಯಿಂದ ಉತ್ತಮ ಯೋಚನೆ ಹಾಗೂ ಯೋಜನೆ.



**ಶ್ರೀ ಸುನೀಲ್ ಕುಮಾರ್, ಸಚಿವರು**


ಯಕ್ಷಗಾನ ಸಾಹಿತ್ಯ ಸಮ್ಮೇಳನವು ಈ ಮೊದಲೂ ಜರುಗಿದ್ದಿದೆ. ಆದರೆ, ಅದು ಖಾಸಗೀ ಸಂಸ್ಥೆಗಳ ಪ್ರಾಯೋಜಕತ್ವದಿಂದ. ಎಷ್ಟೋ ವರ್ಷಗಳ ಮೊದಲೇ, 1983ರಿಂದ 2012ರ ತನಕ ಯಕ್ಷಗಾನ ಪೋಷಕರಾದ ಶ್ರೀ ಎಚ್.ಬಿ.ಎಲ್ ರಾವ್ ರವರು ದೂರದ ಮುಂಬಯಿ ಮಹಾನಗರದಲ್ಲಿ 15ಕ್ಕೂ ಹೆಚ್ಚು ಯಕ್ಷಗಾನ ಸಾಹಿತ್ಯ ಸಮ್ಮೇಳನ ನೆರವೇರಿಸಿದ್ದಾರೆ. ಕರ್ನಾಟಕದಲ್ಲೂ ಹಿರಿಯ ಹವ್ಯಾಸೀ ಕಲಾವಿದರಾದ ಶ್ರೀ ಸೂರ್ಯ ನಾರಾಯಣ ಪಂಜಾಜೆಯವರು, ತಮ್ಮ ಕರ್ನಾಟಕ ಸಾಂಸ್ಕೃತಿಕ ಕಲಾ ಪ್ರತಿಷ್ಠಾನದ ಮೂಲಕ, ಕಳೆದ 15 ವರ್ಷಗಳಿಂದಲೂ ವೈಯಕ್ತಿಕ ನೆಲೆಯಲ್ಲಿ, ಸಂಘ ಸಂಸ್ಥೆಗಳ ಪ್ರಾಯೋಜಕತ್ವದಲ್ಲಿ ಯಕ್ಷಗಾನ ಸಾಹಿತ್ಯ ಸಮ್ಮೇಳನವನ್ನು ನೆರವೇರಿಸಿದ ದಾಖಲೆಯಿದೆ. 2018ರಲ್ಲಿ ಕುಂದಾಪುರದಲ್ಲಿ, ಭಂಡಾರ್ಕಾರ್ಸ್ ಕಾಲೇಜಿನ ಪ್ರಾಯೋಜಕತ್ವದಲ್ಲಿ ಪಂಜಾಜೆಯವರು ಹಮ್ಮಿಕೊಂಡ 13ನೇ ಯಕ್ಷಗಾನ ಸಾಹಿತ್ಯ ಸಮ್ಮೇಳನದಲ್ಲಿ ನಾನೂ ಭಾಷಣಕಾರನಾಗಿ ಭಾಗವಹಿಸಿದ್ದೆ. ಆದರೆ ಇದೀಗ ಸರಕಾರೀ ಪ್ರಾಯೋಜಕತ್ವದಲ್ಲಿ ಉಡುಪಿಯಲ್ಲಿ ಜರುಗುವ ಸಮ್ಮೇಳನ ಪ್ರಥಮ ಎನ್ನಬಹುದು. ಈ ಸಮ್ಮೇಳನದಲ್ಲಿ ಪಡುವಲಪಾಯ ಯಕ್ಷಗಾನದ ಪ್ರಕಾರಗಳಾದ ತೆಂಕು, ಬಡಗು, ಬಡಾಬಡುಗು ಮತ್ತು ಮೂಡಲಪಾಯ, ದೊಡ್ಡಾಟ ಮುಂತಾದ ಯಕ್ಷಗಾನ ಪ್ರಬೇಧಗಳ ಪ್ರದರ್ಶನ, ಚಿಂತನ, ಗೋಷ್ಠಿಗಳು ಜರುಗಲಿದೆ. ಯಕ್ಷಗಾನದ ಸಮಸ್ಯೆ, ಭವಿಷ್ಯ, ಸಮಕಾಲೀನ ಸ್ಥಿತಿಗಳ ಅವಲೋಕನ, ಯಕ್ಷಗಾನವನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಯೋಜನೆ, ಯಕ್ಷಗಾನದ ಉಳಿಸುವಿಕೆ ಹಾಗೂ ಬೆಳೆಸುವಿಕೆಯ ಕುರಿತೂ ಬೆಳಕು ಚೆಲ್ಲುವ ಉದ್ದೇಶ ಈ ಸಮ್ಮೇಳನ ಹೊಂದಿದೆ. ಅಹೋರಾತ್ರಿ ಯಕ್ಷಗಾನ ಪ್ರದರ್ಶನ, ತಾಳಮದ್ದಳೆ ಪ್ರಸ್ತುತಿ, ಯಕ್ಷಗಾನ ಸಾಹಿತ್ಯದ ಪುಸ್ತಕದ ಪ್ರದರ್ಶನ ಹಾಗೂ ಮಾರಾಟ, ಯಕ್ಷಗಾನದ ಎಲ್ಲಾ ಪ್ರಬೇಧಗಳ ಪ್ರದರ್ಶನ ಈ ಸಮ್ಮೇಳನದ ಮುಖ್ಯ ಆಕರ್ಷಣೆಯಾಗಲಿದೆ.




"ಬಣ್ಣ ಹಚ್ಚಿ, ವೇಷ ಕಟ್ಟಿ" ಎಂಬ ಪರಿಕಲ್ಪನೆಯಲ್ಲಿ, ಯಕ್ಷಗಾನದ ಆಸಕ್ತ ಅಭಿಮಾನಿಗಳಿಗೆ ತೆಂಕು – ಬಡಗು ತಿಟ್ಟಿನ ಯಕ್ಷಗಾನದ ವೇಷ ಮಾಡುವ ಅವಕಾಶವೂ ಈ ಸಮ್ಮೇಳನದಲ್ಲಿ ವಿಶೇಷವಾಗಿ ದೊರಕಲಿದೆ. ಸಮ್ಮೇಳನದಲ್ಲಿ ಕೈಗೊಂಡ ನಿರ್ಧಾರವನ್ನು ಸರಕಾರೀ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಆಶಯವೂ ಈ ಸಮ್ಮೇಳನದ ಮೂಲೋದ್ದೇಶವಾಗಿದೆ. ಈ ಸಮ್ಮೇಳನ ಸರಕಾರೀ ಮಟ್ಟದಲ್ಲಿ ಜರುಗುವ ಕಾರಣ, ಸಮ್ಮೇಳನದಲ್ಲಿ ಕೈಗೊಳ್ಳುವ ನಿರ್ಧಾರಗಳು ಅನುಷ್ಠಾನಗೊಳ್ಳಬಹುದು ಎಂದು ನಿರೀಕ್ಷಿಸಲಾಗಿದೆ.

"ಯಕ್ಷಗಾನ ಸಾಹಿತ್ಯ ಸಮ್ಮೇಳನ" ಎಂಬುದು ಕಲೋಚಿತ ಹಾಗೂ ಕಾಲೋಚಿತ ಕಾರ್ಯಕ್ರಮ. ಕರಾವಳಿಯ "ಗಂಡುಕಲೆ' ಎನಿಸಿದ ಯಕ್ಷಗಾನಕ್ಕೆ ನ್ಯಾಯ ಒದಗಿಸುವಲ್ಲಿ ಈಗಿನ ಕರ್ನಾಟಕ ಸರಕಾರದ ಈ ನಿರ್ಧಾರ ಖಂಡಿತವಾಗಿಯೂ ಐತಿಹಾಸಿಕವೇ ಹೌದು. ಇಷ್ಟರ ತನಕ, ಪ್ರತೀ ವರ್ಷ ಸರಕಾರೀ ಮಟ್ಟದಲ್ಲಿ ಜರುಗುತ್ತಿರುವ "ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನ"ದಲ್ಲಿ ಯಕ್ಷಗಾನವನ್ನು ಕಡೆಗಣಿಸಿರುವುದು ತಿಳಿದ ವಿಷಯವೇ ಹೌದು. ಇಷ್ಟರ ತನಕ, ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ, ಕೊನೆಯ ದಿನದ ಅಂತ್ಯದಲ್ಲಿ ಯಕ್ಷಗಾನ ಪ್ರದರ್ಶನ. ಆದರೆ, ಸಮ್ಮೇಳನಕ್ಕೆ ಬಂದ ಪ್ರತಿನಿಧಿಗಳು ಮರಳಿ ತಮ್ಮ ಊರಿಗೆ ಹೋಗುವ ಧಾವಂತದಲ್ಲಿ, ಯಕ್ಷಗಾನ ಪ್ರದರ್ಶನ ಯಾರೂ ನೋಡಲಾಗದ ಪರಿಸ್ಥಿತಿ. ಅಂತೂ ಕಾಟಾಚಾರಕ್ಕೆ ಯಕ್ಷಗಾನಕ್ಕೆ ಪ್ರಾತಿನಿಧ್ಯ ನೀಡುತ್ತಿದ್ದರು ಎನ್ನಬಹುದು. ಆದರೆ, ಇದನ್ನು ನೀಗಿಸುವ ಕ್ರಮ ಈ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಮುಖ್ಯ ಉದ್ದೇಶವಾಗಲಿ ಎಂಬುದು ಯಕ್ಷಗಾನ ಅಭಿಮಾನಿಗಳ ಅಭಿಮತವೂ ಹೌದು.

ಇದೀಗ, ಫೆಬ್ರವರಿ 11, 12 ರಂದು "ಯಕ್ಷಗಾನ ಸಾಹಿತ್ಯ ಸಮ್ಮೇಳನ"ವನ್ನು ಉಡುಪಿಯಲ್ಲಿ, ಸರಕಾರೀ ಮಟ್ಟದಲ್ಲಿ ಪ್ರಾಯೋಜಿಸುತ್ತಿರುವುದು ಸಂತಸದ ವಿಷಯ. ಆದರೆ ಸರಕಾರದ ಕಾರ್ಯಕ್ರಮ ಎಂದಾಗ, ಕೆಲವೊಂದು ಆಭಾಸಗಳಾಗುವುದೇ ಹೆಚ್ಚು. ಎಲ್ಲಾ ಪ್ರಮುಖ ಸ್ಥಾನಗಳನ್ನು ದಕ್ಕಿಸಲು ಕೆಲವೊಂದು ವ್ಯಕ್ತಿಗಳು ಪ್ರಭಾವ ಬೀರುವುದು, ವಶೀಲಿಬಾಜಿ ಮಾಡುವುದು ಸರ್ವೇ ಸಾಮಾನ್ಯ. ಹಾಗಾದಾಗ, ಯಕ್ಷಗಾನದ ಬಗ್ಗೆ ಏನೇನೂ



ಎಂ.ಶಾಂತರಾಮ ಕುಡ್ವ

ಅನುಭವವಿಲ್ಲದ, ಕೊಡುಗೆ ನೀಡದ ವ್ಯಕ್ತಿಗಳಿಗೆ ಈ ಸ್ಥಾನ ದೊರಕಿದರೆ, ಯಕ್ಷಗಾನ ಸಮ್ಮೇಳನ ಮಾಡುವ ಅಗತ್ಯವಾದರೂ ಏನು? ಇದರಿಂದ ಯಕ್ಷಗಾನಕ್ಕೆ ಆಗುವ ಲಾಭವಾದರೂ ಏನು? ಎನ್ನುವ ಪ್ರಶ್ನೆ ಮೂಡುವುದು ಸಹಜ. ಹಾಗಾಗಿ ಯಕ್ಷಗಾನ ಸಮ್ಮೇಳನದ ಅಧ್ಯಕ್ಷರ ಆಯ್ಕೆ, ಗೋಷ್ಠಿ, ವಿಚಾರ ಸಂಕಿರಣ, ಪ್ರದರ್ಶನಗಳಿಗೆ, ವಿವಿಧ ಸಮಿತಿಗಳಿಗೆ ಯಕ್ಷಗಾನದ ಅನುಭವ, ತಿಳುವಳಿಕೆ, ಯಕ್ಷಗಾನಕ್ಕೆ ಕೊಡುಗೆ ನೀಡಿದ ವ್ಯಕ್ತಿಗಳನ್ನೇ ಆಯ್ಕೆ ಮಾಡಿ, ಆ ಮೂಲಕ ಯಕ್ಷಗಾನ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡುವಲ್ಲಿ ಇರುವ ದೊಡ್ಡ ಹೊಣೆಗಾರಿಕೆಯನ್ನು ಮಾನ್ಯ ಸಚಿವರಾದ ಶ್ರೀ ಸುನೀಲ್ ಕುಮಾರ್‌ರು ಸಮರ್ಪಕವಾಗಿ ನಿರ್ವಹಿಸಿದರೆ ಮಾತ್ರ, ಕರ್ನಾಟಕ ಸರಕಾರದ ಮಹತ್ವಾಕಾಂಕ್ಷೆಯ ಪ್ರಥಮ "ಯಕ್ಷಗಾನ ಸಾಹಿತ್ಯ ಸಮ್ಮೇಳನ" ಯಶಸ್ವಿಯಾಗಬಹುದು. ಪ್ರಭಾವ ಬೀರುವ, ವಶೀಲಿಬಾಜಿ ಮಾಡುವ, ಅನುಭವವಿಲ್ಲದ ವ್ಯಕ್ತಿಗಳನ್ನು ಕಾರ್ಯಕ್ರಮದಲ್ಲಿ ಬಳಸಿಕೊಂಡರೆ "ಸರಕಾರೀ ಕಾರ್ಯಕ್ರಮ ಎಂದರೆ, ಬಿಳಿಯಾನೆ ಸಾಕಿದಂತೆ" ಎಂಬ ಆಧುನಿಕ ಗಾದೆ ಸತ್ಯವಾದೀತು. ಇದನ್ನು ನಿವಾರಿಸಿ, ಯೋಗ್ಯ ವ್ಯಕ್ತಿಗಳನ್ನೇ ಆಯ್ಕೆ ಮಾಡಿದಾಗ ಮಾತ್ರ ಈ ಯಕ್ಷಗಾನ ಸಮ್ಮೇಳನ ಅರ್ಥಪೂರ್ಣವಾದೀತು. ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸುವ ಬದ್ಧತೆ ಸರಕಾರಕ್ಕೆ ಇರಬೇಕು. ಇಲ್ಲದಿದ್ದಲ್ಲಿ ಈ ಸಮ್ಮೇಳನದಿಂದಾಗಿ ದೊರಕುವ ಪ್ರಯೋಜನವಾದರೂ ಏನು? ಎಂಬ ಪ್ರಶ್ನೆ ಮೂಡುವುದು ಸಹಜ. – ***ಎಂ .ಶಾಂತರಾಮ ಕುಡ್ವ, ಮೂಡುಬಿದಿರೆ***

---

## ಬಡಗುತಿಟ್ಟು ರಂಗಸ್ಥಳದಲ್ಲಿ ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟಿ

ಯಕ್ಷಗಾನ ಆಟ–ಕೂಟಗಳ ಅನರ್ಘ್ಯರತ್ನ ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟರು ಆರು ವರ್ಷಗಳ ಹಿಂದೆ ಮಾರ್ಚ್ 22ರಂದು ಯಕ್ಷಗಾನದ, ಇಹಲೋಕ ನಂಟು ಕಳಚಿ ಅಗಲಿದ್ದಾರೆ. ಬಡಗುತಿಟ್ಟು ಯಕ್ಷಗಾನಕ್ಕೆ ಅವರ ಕಲಾಸೇವೆಯ ಬಗ್ಗೆ ಬೆಳಕು ಚೆಲ್ಲುವ ಈ ನುಡಿನಮನ ಇಂದಿಗೆ ಸಕಾಲಿಕವಾದದ್ದು. ಯಕ್ಷಗಾನ, ತಾಳಮದ್ದಳೆಯ ಪರಿಪೂರ್ಣ ಕಲಾವಿದರಾದ ಚೆನ್ನಪ್ಪ ಶೆಟ್ಟರ ಬಡಗುತಿಟ್ಟು ಮೇಳದ ತಿರುಗಾಟ ಪ್ರಾರಂಭವಾದದ್ದು ಬಡಗಿನ ಪ್ರಸಿದ್ದ ಡೇರೆ ಮೇಳವಾದ ಪೆರ್ಡೂರು ಮೇಳದಲ್ಲಿ.




**ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟಿ**

ಬಹುಶಃ ಅವರ ಸಾಮಾಜಿಕ ಪ್ರಸಂಗದಲ್ಲಿನ ಪಾತ್ರಗಳ ಪರಿಪಕ್ವತೆ ಒರೆಗೆ ಹಚ್ಚಿದ್ದು ಸಹ ಇಲ್ಲಿಯೇ ಎನ್ನಬಹುದು. ಅವರ ಸಮಾನ ಶ್ರೇಣಿಯ ಬಡಗಿನ ಕಲಾವಿದ ರಾಜ್ಯ ಪ್ರಶಸ್ತಿ ಪುರಸ್ಕೃತ ಐರೋಡಿ ಗೋವಿಂದಪ್ಪನವರಿಂದ ತೆರವಾದ ಸ್ಥಾನವನ್ನು ಹೆಚ್ಚು ಸಮರ್ಪಕವಾಗಿ ತುಂಬಿದವರು ಪೆರ್ಡೂರು ಮೇಳದಲ್ಲಿ ಚೆನ್ನಪ್ಪ ಶೆಟ್ಟರು. ಬಡಗುತಿಟ್ಟಿನ ಹೆಜ್ಜೆಗಾರಿಕೆಯಲ್ಲಿ ತಾನು ಸೋಲಬಾರದು ಎಂಬ ಇರಾದೆಯಿಂದ ದಶಾವತಾರಿ ನೃತ್ಯಗುರು ಹೇರಂಜಾಲು ವೆಂಕಟರಮಣ ಗಾಣಿಗರಿಂದ ಪರಂಪರೆಯ ಬಡಗಿನ ಹೆಜ್ಜೆಗಾರಿಕೆ ಕಲಿತು ಪೆರ್ಡೂರು ಮೇಳಕ್ಕೆ ಸೇರಿದವರವರು.

ಪ್ರಸಿದ್ದ ಪ್ರಸಂಗಕರ್ತ ಡಾ/ ವೈ ಚಂದ್ರಶೇಖರ ಶೆಟ್ಟರು ಚೆನ್ನಪ್ಪ ಶೆಟ್ರ ವಿದ್ವತ್ತನ್ನು ಒರೆಗೆ ಹಚ್ಚುವ ಸಲುವಾಗಿಯೇ ರಚಿಸಿದ ಪ್ರಸಂಗ ಎನ್ನಬಹುದಾದ ಆ ವರ್ಷದ ಸುಪರ್ ಹಿಟ್ ಪ್ರಸಂಗ ಪದ್ಮ– ಪಲ್ಲವಿಯಲ್ಲಿನ ಅವರ ಕಪಿಲನ ಪಾತ್ರ. ಹಿರಿಯ ಕಲಾವಿದರಾದ ಆರ್ಗೋಡು ಮೋಹನದಾಸ ಶೆಣೈಯವರ ಕಾರ್ತಿಕ ಚೆನ್ನಪ್ಪ ಶೆಟ್ಟರ ಕಪಿಲ ಪಾತ್ರಗಳ ಜೋಡಿವೇಷ ಹೊಸ ಪ್ರಸಂಗಳಲ್ಲೇ ಕ್ರಾಂತಿ ಮೂಡಿಸಿತ್ತು. ಸುಮಾರು ಒಂದುವರೆ ತಾಸು ಹೆಣ್ಣು ತ್ಯಾಗದ ಸಂಕೇತ ಎಂದು ಚೆನ್ನಪ್ಪ ಶೆಟಟ್ಟರು ಹೆಣ್ಣು ಭೋಗದ ಸಂಕೇತ ಎನ್ನುವ ಶೆಣೈಯವರ ಸೋದಾಹರಣೆ ಸಹಿತದ ವಾದ, ತಾಳ ಮದ್ದಳೆಯ ವಾದವನ್ನೇ ಮೀರಿಸುತಿತ್ತು. ರಂಗದಲ್ಲಿ ಹೊಸದಾಗಿ ಸೇರ್ಪಡೆಗೊಂಡ ಚೆನ್ನಪ್ಪ ಶೆಟ್ಟರ ಪದ್ಯಕ್ಕೂ ಸ್ವತಃ ಶೆಣೈಯವರು ಹೆಜ್ಜೆ ಹಾಕಿ ಅವರನ್ನು ಹುರಿದುಂಬಿಸಿದ್ದು ಮಾತ್ರವಲ್ಲದೇ ಮೇಳದ ಹೊರಗೂ ಅವರಿಬ್ಬರು ಸಾಕಷ್ಟು ಅನ್ಯೋನ್ಯರಾಗಿದ್ದರು. ಸುಬ್ರಮಣ್ಯ ಧಾರೇಶ್ವರ, ಸುರೇಶ ಶೆಟ್ಟಿ, ದುರ್ಗಪ್ಪ ಗುಡಿಗಾರ್ ಗಜಾನನ ದೇವಾಡಿಗರ ಗಜಗಟ್ಟಿ ಹಿಮ್ಮೇಳ, ಸಹಕಲಾವಿದರಾಗಿ ತೀರ್ಥಳ್ಳಿ ಗೋಪಾಲಾಚಾರ್, ರಾಮ ನಾಯರಿ ,ಐರೋಡಿ ಗೋವಿಂದಪ್ಪ, ಮುರೂರು ವಿಷ್ಣು ಭಟ್, ಕಿನ್ನಿಗೋಳಿ ಮುಖ್ಯಪ್ರಾಣ, ರಮೇಶ ಭಂಡಾರಿಯವರೊಂದಿಗೆ ಪ್ರಸಂಗ ಜಯಭೇರಿ ಬಾರಿಸಿತ್ತು. ಮುಂದಿನ ತಿರುಗಾಟಗಳಲ್ಲಿ ಚೈತ್ರಚಂದನ ಪ್ರಸಂಗದಲ್ಲಿ ವಿದ್ಯೆ ಮೇಲೋ, ಹಣ ಮೇಲೋ ಎನ್ನುವುದರ ಬಗ್ಗೆ ಅವರ ವಾದ, ಸಿರಿ ಸಂಪಿಗೆ, ಗಿರಿಮಲ್ಲಿಗೆ ಪ್ರಸಂಗದಲ್ಲಿನ ಅವರ ಪಾತ್ರ ಮರೆಯಲಾಗದ್ದು. ತೆಂಕಿನಲ್ಲಿ ಹೆಸರುವಾಸಿಯಾದ ಖ್ಯಾತ ಹಾಸ್ಯ ಕಲಾವಿದ ಸೀತಾರಾಮ್ ಕುಮಾರರನ್ನು ಬಡಗಿಗೆ ಪರಿಚಯಿಸುವುದರಲ್ಲೂ ಅವರ ಪಾತ್ರ ಗಣನೀಯ. ಸುಮಾರು ಐದು ವರ್ಷ ಪೆರ್ಡೂರು ಮೇಳದ ಟ್ರಂಪ್ ಕಾರ್ಡ್ ಕಲಾವಿದರಾಗಿ ಮೆರೆದವರವರು. ಪೌರಾಣಿಕ ಪ್ರಸಂಗದ ಪಾತ್ರಗಳಿಗೂ ಪೆರ್ಡೂರು ಮೇಳದಲ್ಲಿ ಸಮರ್ಥವಾಗಿ ಜೀವತುಂಬಿದ ಅವರ ರಾಮಾಂಜನೇಯದ ರಾಮ ಮುರೂರು ವಿಷ್ಣು ಭಟ್ಟರ ಸೀತೆ ಜೋಡಿ ವೇಷ ಅಪಾರಜನ ಮನ್ನಣೆ ಪಡೆದಿತ್ತು. ಪೆರ್ಡೂರು ಮೇಳದ ಯಶಸ್ವಿ ತಿರುಗಾಟದ ನಂತರ ಬಡಗುತಿಟ್ಟಿನ ಹಿರಿಯ ಡೇರೆಮೇಳವಾದ ಸಾಲಿಗ್ರಾಮ ಮೇಳ ಸೇರಿದ ಅವರು ಅಲ್ಲಿ ನಿರ್ವಹಿಸಿದ ರಂಗನಾಯಕಿ ಪ್ರಸಂಗದ ಎಚ್ಚಮ ನಾಯಕನ ಪಾತ್ರದಿಂದ ತಾನೊಬ್ಬ ಐತಿಹಾಸಿಕ ಪ್ರಸಂಗದಲ್ಲೂ ಸಮರ್ಥವಾಗಿ ಅಭಿನಯಿಸಬಲ್ಲೆ ಎಂದು ತೋರಿಸಿಕೊಟ್ಟರು. ಕನ್ನಡಿಗರ ಕಣ್ಮಣಿ ಎಚ್ಚಮ ನಾಯಕನ ಧೀರ ದಿಟ್ಟ ಮಾತುಗಾರಿಕೆ ಪ್ರೇಕ್ಷಕರ ಕಣ್ಣಂಚಿನಲ್ಲಿ ಕಣ್ಣೀರು ಬರಿಸುತಿತ್ತು. ಮುರೂರು ವಿಷ್ಣು ಭಟ್ ಹಾಗೂ ಚೆನ್ನಪ್ಪ ಶೆಟ್ಟರ ಭಾವಪೂರ್ಣ ಅಭಿನಯದ ಸಂಭಾಷಣೆ ಬಹುಕಾಲ ನೆನಪುಳಿಯ ಬಹುದಾದದ್ದು. ಹೇರಂಜಾಲು ಗೋಪಾಲ ಗಾಣಿಗ,ಕೊಳಗಿ ಕೇಶವ ಹೆಗಡೆಯವರ ಹಿಮ್ಮೇಳದಲ್ಲಿ ಸಹಕಲಾವಿದರಾಗಿ ದಿ.ಹೊಸಂಗಡಿ ಜಯರಾಮ ಗಾಣಿಗ, ಕೊಂಡದಕುಳಿ ರಾಮಚಂದ್ರ ಹೆಗಡೆ ಬಳ್ಕೂರು ಕೃಷ್ಣ ಯಾಜಿ, ಹಳ್ಳಾಡಿ ಜಯರಾಮ ಶೆಟ್ಟಿ, ಥಂಡಿಮನೆ ಶ್ರೀಪಾದ ಹೆಗಡೆ ಮುಂತಾದ ಘಟಾನುಘಟಿ



**ಪ್ರೋ.ಎಸ್.ವಿ.ಉದಯ ಕುಮಾರ ಶೆಟ್ಟಿ**

ಬಡಗಿನ ಕಲಾವಿದರೊಂದಿಗೆ ಅವರು ಎಂದಿಗೂ ಬೇರೆಯಾಗಿ ಕಾಣಿಸಲಿಲ್ಲ. ಮಾರನೆಯ ವರ್ಷದ ಅಳಿಯ ರಾಮರಾಯ ಪ್ರಸಂಗದ ಅಪ್ಪಾಜಿಯ ಪಾತ್ರವನ್ನೂ ಅಷ್ಟೇ ಸಮರ್ಥವಾಗಿ ನಿರ್ವಹಿಸಿದ್ದರು. ಬಳಿಕ ಪುನಹ ಪೆರ್ಡೂರು ಮೇಳದಲ್ಲಿ ತಿರುಗಾಟ ಮಾಡಿ ತೆಂಕಿಗೆ ಮುಖ ಮಾಡಿದ ಅವರು ನಂತರ ಬಡಗಿಗೆ ಬರುವಲ್ಲಿ ವಿಧಿ ಮನಸ್ಸು ಮಾಡಲಿಲ್ಲ ಎನ್ನುವುದೇ ನೋವು ತರಿಸುವ ವಿಚಾರ. ಸುಮಾರು ಹತ್ತು ವರ್ಷಕ್ಕೂ ದೀರ್ಘಕಾಲ ಬಡಗುತಿಟ್ಟಿನ ಎರಡು ಡೇರೆ ಮೇಳಗಳಲ್ಲಿ ಸುಸಂಸ್ಕೃತ ಕಲಾವಿದನಾಗಿ ಮೆರೆದ ಅವರು ಮೇಳದ ಯಜಮಾನರುಗಳಿಗೆ ಯಾವುದೇ ತೊಂದರೆ ಕೊಟ್ಟವರಲ್ಲ. ಯಜಮಾನರುಗಳಾದ ವೈ ಕರುಣಾಕರ ಶೆಟ್ಟಿ ಮತ್ತು ಪಿ ಕಿಷನ್ ಹೆಗ್ಡೆಯವರಿಗೆ ಪ್ರೀತಿ ಪಾತ್ರರಾಗಿದ್ದ ಕೆಲವೇ ಕಲಾವಿದರಲ್ಲಿ ಶೆಟ್ಟರು ಮೊದಲಿಗರಾಗುತ್ತಾರೆ. ಅವರ ನಿಧನದ ವಾರ್ತೆಯನ್ನು ಕೇಳಿದಾಗ ನೊಂದು ಮಾತನಾಡಲಾಗದ ಯಜಮಾನರ ಮಾನಸಿಕ ತುಮುಲವನ್ನು ನಾನು ಕಣ್ಣಾರೆ ಕಂಡವನಾಗಿದ್ದೇನೆ. ಸಹಕಲಾವಿದರಲ್ಲಿ ಉತ್ತಮ ಸಂಬಂಧ ಹೊಂದಿದ ಅವರು ಸಹಕಲಾವಿದರ ದುರಭ್ಯಾಸಗಳನ್ನು ನೇರವಾಗಿ ಕಂಡಿಸುತಿದ್ದರು. ಆದರೆ ಚೌಕಿಯಲ್ಲಿ ಸಹ ಕಲಾವಿದರಿಗೆ ಗುರುವಾಗಿದ್ದರು. ಸಮಾನ ಶ್ರೇಣಿಯ ಕಲಾವಿದರ ಬಗ್ಗೆ ಯಕ್ಷಗಾನ ಅಥವಾ ಇತರ ಕಲಾ ಮಾಧ್ಯಮದಲ್ಲಿ ಸಾಮಾನ್ಯವಾಗಿ ಕಾಣುವ ಯಾವುದೇ ವೃತ್ತಿ ಮತ್ಸರವೆಂಬ ಭೂತ ಅವರನ್ನು ಕಾಡಲೇ ಇಲ್ಲ ಎನ್ನುವುದಕ್ಕೆ ಹಿರಿಯರಾದ ಐರೋಡಿ ಗೋವಿಂದಪ್ಪನವರಿಗೆ ರಾಜ್ಯ ಪ್ರಶಸ್ತಿ ಬಂದಾಗ ಪೆರ್ಡೂರು ಮೇಳದಲ್ಲಿ ಏರ್ಪಡಿಸಿದ ಸನ್ಮಾನ ಸಮಾರಂಭದಲ್ಲಿ ಸಂಘಟಕರಲ್ಲಿ ತಾವೇ ವಿನಂತಿಸಿಕೊಂಡು ಅವರ ಅಭಿನಂದನಾ ಭಾಷಣವನ್ನುಅರ್ಥಪೂರ್ಣವಾಗಿ ನಿರ್ವಹಿಸಿದ್ದರು. ಅಂದು ಉಡುಪಿಯಲ್ಲಿ ನೆಡೆದ ಅದ್ದೂರಿಯ ಅಟ್ಟಣಿಗೆ ಆಟ ಐರಾವತ ಪ್ರಸಂಗದಲ್ಲಿ ಚೆನ್ನಪ್ಪ ಶೆಟ್ಟರ ದೇವೇಂದ್ರ, ಐರೋಡಿಯವರ ಅರ್ಜುನ ತೆಂಕು ಬಡಗಿನ ಪರಂಪರೆಯನ್ನು ಬಿಂಬಿಸಿ ದಾಖಲೆ ಆಟವಾಗಿದ್ದು ಮಾತ್ರವಲ್ಲದೆ ಕರಾವಳಿಯ ವಿವಿದ ಪತ್ರಿಕೆಗಳು ಮುಕ್ತ ಕಂಠದಿಂದ ಹೊಗಳಿದ್ದವು.

ಯಜಮಾನರಿಗೆ ನಿಷ್ಠ ಕಲಾವಿದರಾಗಿ ಸಹ ಕಲಾವಿದರಿಗೆ ಪ್ರೀತಿ ಪಾತ್ರರಾಗಿ ಪ್ರಸಂಗದ ಆಶಯಕ್ಕನುಗುಣವಾಗಿ ಅಭಿನಯಿಸಿ ಪ್ರಸಂಗಕರ್ತರಿಗೆ ಸಹಕಾರಿಯಾಗಿ ಪ್ರೇಕ್ಷಕರಿಗೆ ಅನಿವಾರ್ಯವಾಗಿ ಇನ್ನು ಕನಿಷ್ಟ 20 ವರ್ಷ ಬಡಗು ತೆಂಕು ರಂಗಸ್ಥಳಕ್ಕೆ ಅನಿವಾರ್ಯರಾಗಿದ್ದ ಚೆನ್ನಪ್ಪ ಶೆಟ್ಟರು ಇನ್ನಿಲ್ಲವೆನ್ನುವುದು ನಂಬಲಾರದ ಸತ್ಯ. – ***ಪ್ರೋ.ಎಸ್.ವಿ.ಉದಯಕುಮಾರ ಶೆಟ್ಟಿ. ಮಣಿಪಾಲ***

## ಶಿರೂರು ಫಣಿಯಪ್ಪಯ್ಯನವರ ಪ್ರಸಂಗ ಪ್ರದರ್ಶನ




**ಶಿರೂರು ಫಣಿಯಪ್ಪಯ್ಯ** ಯಕ್ಷಗಾನ ಕ್ಷೇತ್ರ ಕಂಡ ಮೇರು ಪ್ರಸಂಗಕರ್ತರಾಗಿದ್ದು, ಅನೇಕ ಮೌಲ್ವಿಕ ಪ್ರಸಂಗಗಳನ್ನು ನೀಡಿದ ಹಿರಿಮೆ ಅವರದ್ದು. ಅವರ ಕಾಲ 1918- 2002. ಶಿರೂರಿನ **ಫಣಿಗಿರಿ ಪ್ರತಿಷ್ಠಾನ**ವು ಫಣಿಯಪ್ಪಯ್ಯನವರ ಅಪ್ರಕಟಿತ ಪ್ರಸಂಗಗಳನ್ನು ಹಿರಿಯ ಯಕ್ಷಗಾನ ವಿದ್ವಾಂಸ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರ ಸಂಪಾದಕತ್ವದಲ್ಲಿ ಪ್ರಕಟಣೆ ಮಾಡಿದ್ದು ಅದರಲ್ಲಿ ಎರಡು ಪ್ರಸಂಗಗಳು ಡಿಸೆಂಬರ್ ತಿಂಗಳಿನಲ್ಲಿ ಪ್ರದರ್ಶನಗೊಂಡಿವೆ. ಡಿಸೆಂಬರ್ 4, 2022ರಂದು ಕೋಟೇಶ್ವರದ ಕೊಡಿಹಬ್ಬದ ದಿನ ಶ್ರೀ ಕೋಟಿಲಿಂಗೇಶ್ವರ ಕಲಾಬಳಗದವರಿಂದ ಫಣಿಯಪ್ಪಯ್ಯನವರ **ವಾಜಿಗ್ರಹಣ** ಪ್ರಸಂಗವು ಯಕ್ಷಗಾನ ಗುರು



ಶ್ರೀ ಕಡ್ಲೆ ಗಣಪತಿ ಹೆಗ್ಡೆಯವರ ನಿರ್ದೇಶನದಲ್ಲಿ ಪ್ರದರ್ಶನಗೊಂಡಿತು. ಈ ಪ್ರಸಂಗ 1940ರಲ್ಲಿ ಫಣಿಯಪ್ಪನವರಿಂದ ರಚಯಿತವಾಗಿದೆ. ಬಾಲಕಲಾವಿದರು ಪ್ರಸ್ತುತ ಪಡಿಸಿದ ಈ ಆಖ್ಯಾನ ಯಕ್ಷಾಭಿಮಾನಿಗಳ ಪ್ರಸಂಶೆಗೆ ಪಾತ್ರವಾಯಿತು.

ಇದೇ ಕವಿಯ **ಸತಿ ನಯನಾವತಿ** ಎಂಬ ಮತ್ತೊಂದು ಪ್ರಸಂಗವನ್ನು ಹಂಗಾರಕಟ್ಟೆ ಐರೋಡಿಯ ಯಕ್ಷಗಾನ ಕಲಾಕೇಂದ್ರದವರು ಡಿಸೆಂಬರ್ 23 ರಂದು ಆಡಿ ತೋರಿಸಿದ್ದಾರೆ. ಪ್ರದರ್ಶನದಲ್ಲಿ ಕೊಂಡದಕುಳಿ ರಾಮಚಂದ್ರ ಹೆಗಡೆ, ಹೆನ್ನಾಬೈಲು ಸಂಜೀವ ಶೆಟ್ಟಿ, ಕುಳಿಮನೆ ನಾಗೇಶ, ಯೋಗಿಂದ್ರ ಮರವಂತೆ, ಚಪ್ಪರಮನೆ ಶ್ರೀಧರ, ವೆಂಕಟೇಶ ಕ್ರಮಧಾರಿ ಮೊದಲಾದ ಕಲಾವಿದರು ಬಣ್ಣ ಹಚ್ಚಿದ್ದರು. ಪ್ರಬುದ್ಧ ಕಲಾವಿದ ಉತ್ತಮ ಪ್ರಸ್ತುತಿ ಜನಮನ್ನಣೆಗೆ ಪಾತ್ರವಾಯಿತು.

### ಕಂಬನಿ – ಗುರುವಪ್ಪ ಬಾಯಾರು



**ಕ**ಟೀಲು ನಾಲ್ಕನೇ ಮೇಳದಲ್ಲಿ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದ ಗುರುವಪ್ಪ ಬಾಯಾರು ರಂಗಸ್ಥಳದಲ್ಲೇ ಹೃದಯಾಘಾತದಿಂದ ಮೃತಪಟ್ಟಿದ್ದು ಅವರ ಸಾವಿಗೆ ನಾದನೂಪುರ ಪತ್ರಿಕಾ ಬಳಗ ಕಂಬನಿ ಮಿಡಿಯುತ್ತದೆ. ಶ್ರೀಯುತರು ಕಾಸರಗೋಡು ತಾಲೂಕಿನ ಬಾಯಾರು ಗ್ರಾಮದ ಕರಿಯ ದೇವಾಡಿಗ ಹಾಗೂ ಲಕ್ಷ್ಮೀ ದಂಪತಿಗಳ ಪುತ್ರರಾಗಿ 1961ರಲ್ಲಿ ಜನಿಸಿದವರು. ಇವರು ಕಲಾವಿದರು ಮಾತ್ರವಲ್ಲದೆ, ಕೀರ್ತಿ ಚಂದ್ರಿಕೆ, ಘಟ್ಟದ ಗರುಡೆ, ಗಂಧರ್ವ ನರ್ತಕಿ, ಕುಡ್ಲದ ಕುರಲ್, ಕಡಲ ಕೇಸರಿ, ಚಂದ್ರ ಮಲ್ಲಿಗೆ, ಸೂರ್ಯ ಕಾಂತಿ, ನಾಗಂಡಲ, ಅಷ್ಟ ಮಂಗಲ, ಸ್ವರ್ಣ ಮಲ್ಲಿ, ಪರಕಾಯ ಪಾರಮ್ಯ, ಪೂಜೆದ ಪುಣ್ಣಮೆ, ಮಾಸ್ತಿ ಮಲ್ಲಮ್ಮ, ಸರ್ಪ ಸಂಕ್ರಾಂತಿ, ಸೀಮೆದ ಸಿರಿಗಂಧ, ಸತ್ಯೊದ ಸಿರಿಗಿಂಡೆ ಮೊದಲಾದ ಪ್ರಸಂಗಗಳನ್ನೂ ರಚಿಸಿದ್ದಾರೆ.

# ಕನ್ನಡ ರಾಜ್ಯೋತ್ಸವ ವಿಶೇಷ ಲೇಖನ – ಕನ್ನಡ ಸಾಹಿತ್ಯಕ್ಕೆ ಯಕ್ಷಗಾನದ ಕೊಡುಗೆ

***ಕಳೆದ ಸಂಚಿಕೆಯಿಂದ .. ..***

೧೮ನೇ ಶತಮಾನ ಯಕ್ಷಗಾನ ಪ್ರಸಂಗ ಸೃಷ್ಟಿಯ ಪರ್ವಕಾಲ ಎನ್ನುವುದನ್ನು ಕ್ರಿ.ಶ. ೧೮೬೦ ರಲ್ಲಿ ಬಿ.ಎಲ್ ರೈಸ್ ಅವರು ಪ್ರಕಟಿತ 'ಕರ್ನಾಟಕ ಶಬ್ದಾನುಶಾಸನಂ'ನಲ್ಲಿ ಪ್ರಸ್ತಾಪಿಸುತ್ತಾರೆ. ಯಕ್ಷಗಾನ ಸಾಹಿತ್ಯದ ಹಿರಿಮೆ ಗರಿಮೆಗಳನ್ನು ಅವಲೋಕಿಸುವಾಗ ಮಹತ್ತರವಾದ ವಿಚಾರಗಳನ್ನು ತಿಳಿಯಬಹುದಾಗಿದೆ. ಸುಮಾರು ೭೦೦–೮೦೦ ವರುಷದ ಇತಿಹಾಸವಿರುವ ಯಕ್ಷಗಾನ ಸಾಹಿತ್ಯದಲ್ಲಿ ಸಾವಿರಕ್ಕೂ ಅಧಿಕ ಕವಿಗಳನ್ನು ಗುರುತಿಸಬಹುದು. ಆರು ಸಾವಿರಕ್ಕೂ ಅಧಿಕ ಪ್ರಸಂಗಗಳು ರಚನೆಯಾಗಿ, ಸರಿಸುಮಾರು ೧೦ ಲಕ್ಷಕ್ಕೂ ಅಧಿಕ ಸಂಖ್ಯೆಯ ಪದ್ಯಗಳು ರಚನೆಯಾಗಿದೆ. ಇಷ್ಟೇಯಲ್ಲದೇ ನಲವತ್ತಕ್ಕಿಂತ ಹೆಚ್ಚು ಪಿಹೆಚ್ ಡಿ ಪ್ರಬಂಧಗಳು ದಾಖಲಾಗಿದೆ. ಜೊತೆಗೆ ಡಾ॥ ಶಿವರಾಮ ಕಾರಂತರು, ಶತಾವಧಾನಿ ಡಾ॥ ಆರ್.ಗಣೇಶ್, ಡಾ॥ ರಾಘವ ನಂಬಿಯಾರ್, ಡಾ॥ ಪ್ರಭಾಕರ ಜೋಷಿ, ಡಾ॥ ನಾರಾಯಣ ಶೆಟ್ಟಿ, ಡಾ॥ ಕಬ್ಬಿನಾಲೆ ವಸಂತ್ ಭಾರದ್ವಜ್, ಡಾ॥ ಆನಂದರಾಮ ಉಪಾಧ್ಯ, ಡಾ॥ ಪಾದೆಕಲ್ಲು ವಿಷ್ಣು ಭಟ್, ಡಾ॥ ಜಿ.ಎಸ್ ಭಟ್ ಸಾಗರ ಮುಂತಾದ ವಿದ್ವಾಂಸರು ಯಕ್ಷಗಾನದ ಬಗೆಗೆ ಸಂಶೋಧನ ಗ್ರಂಥಗಳನ್ನು ರಚಿಸಿದ್ದಾರೆ. ವಿಮರ್ಶೆಗಳು, ಚಿಂತನೆಗಳು, ಪತ್ರಿಕೆಗಳಲ್ಲಿ ಬರುವ ಬಿಡಿ ಲೇಖನಗಳು, ಕಲಾವಿದರ ಅಭಿನಂದನ ಗ್ರಂಥಗಳು, ಸಂಸ್ಮರಣ ಗ್ರಂಥಗಳು,ಕಲಾವಿದರ ಆತ್ಮ ಕಥೆಗಳು, ಚಿತ್ರ ಸಂಪುಟಗಳು, ನಾಲ್ಕೈದು ಯಕ್ಷಗಾನಕ್ಕಾಗಿಯೇ ಇರುವ ಪತ್ರಿಕೆಗಳು ಹೀಗೆ ಎಲ್ಲವು ಸೇರಿ ಅಂದಾಜು ಹತ್ತು ಸಾವಿರದಷ್ಟು ಕೃತಿಗಳು ರಚನೆಯಾಗಿವೆ. ಪ್ರಸಂಗ ರಚನೆ ಕಾರ್ಯವು ಕಳೆದ ಐದಾರು ಶತಮಾನಗಳಿಂದ ನಿರಂತರವಾಗಿ ನಡೆಯುತ್ತಲೇ ಇದೆ . ಒಂದು ಕಲಾ ಪ್ರಕಾರದ ಮೇಲೆ ಇಷ್ಟೊಂದು ಸಂಖ್ಯೆಯ ಕೃತಿಗಳು ಕನ್ನಡವನ್ನು ಬಳಸಿ ರಚನೆಯಾಗಿರುವುದು ದಾಖಲೆಯೇ ಸರಿ.

ಕೆಲವು ಶತಮಾನಗಳ ಹಿಂದೆ ರಚಿತವಾದ ಕೃಷ್ಣ ಸಂಧಾನ, ಭೀಷ್ಮ ವಿಜಯ ಇತ್ಯಾದಿ ಪ್ರಸಂಗಗಳು ಇಂದಿಗೂ ಕೂಡ ಅದು ಜೀವಂತವಾಗಿದೆ ಎಂದರೆ ಅದಕ್ಕೆ ಕಾರಣ ಅದರ ಸಾಹಿತ್ಯ. ಅಲ್ಲಿ ಬರುವ ಪಾತ್ರಗಳು, ಸನ್ನಿವೇಶಗಳು ಇತ್ಯಾದಿಗಳ ಬಗೆಗೆ ಇಂದಿಗೂ ಚರ್ಚೆಗಳಾಗಿ ಆ ಪ್ರಸಂಗಗಳು ನಿತ್ಯ ನೂತನದಂತೆ ಕಂಗೊಳಿಸುತ್ತದೆ. ಬಹುಶಃ ಇಲ್ಲಿ ನಡೆದಷ್ಟು ಚರ್ಚೆಗಳು ಬೇರೆ ಯಾವ ಸಾಹಿತ್ಯದಲ್ಲೂ ನಡೆದಂತೆ ಕಾಣಿಸುವುದಿಲ್ಲ. ಆದರೆ ಇದಾವುದೂ ಕೂಡ ಕನ್ನಡ ಸಾರಸ್ವತ ಲೋಕಕ್ಕೆ ಕಾಣಿಸದೆ ಇರುವುದು ಖೇದಕರ ವಿಚಾರ . ಕೇವಲ ನಾವು ಪ್ರಸಂಗದಲ್ಲೀನ ಸಾಹಿತ್ಯವನ್ನು ಮಾತ್ರ ಗ್ರಹಿಸಿದರೆ ಸಾಲುವುದಿಲ್ಲ.ಅದು ಕಟ್ಟಿಕೊಡುವ ಮೌಖಿಕ ಸಾಹಿತ್ಯವನ್ನು ಸಹ ಅವಲೋಕಿಸುವ ಅಗತ್ಯವಿದೆ. ಒಂದು ಪ್ರದರ್ಶನದ ಪ್ರಸ್ತುತಿಯಲ್ಲಿ ಹೊತ್ತಿಗೆ ನೀಡಬಹುದಷ್ಟು ಆಶಯಗಳನ್ನು, ವಿಚಾರಗಳನ್ನು, ಒಳನೋಟವನ್ನು ಕೊಡುವ ಸಾಮರ್ಥ್ಯ ಯಕ್ಷಗಾನ ಪ್ರದರ್ಶನಗಳಲ್ಲಿ ಸಿಗುತ್ತದೆ ಎಂದರೆ ಆಶ್ಚರ್ಯವೆನಿಸುತ್ತದೆ. ಹಾಗಾಗಿಯೇ ಇದನ್ನು ಕೇವಲ ಕಲಾ ವಿಮರ್ಶೆಯ ದೃಷ್ಟಿಕೋನದಿಂದ ನೋಡಿದರೆ ಮಾತ್ರ ಸಾಲದು, ಅದರ ಪ್ರಚುರಪಡಿಸುವ ಸಾಹಿತ್ಯ, ಬಳಸಿಕೊಳ್ಳುವ ವಿಧಾನಗಳು ಇತ್ಯಾದಿಗಳನ್ನು ಸಹ ಮೌಖಿಕ ಸಾಹಿತ್ಯವಾಗಿ ಹೊರಗಿನಿಂದ ನೋಡುವ ಅಗತ್ಯವಿದೆ. ಒಂದು ಅಂದಾಜಿನ ಪ್ರಕಾರ ವಾರ್ಷಿಕವಾಗಿ ಸರಾಸರಿ ಸುಮಾರು ೧೦ ಸಾವಿರ(ಕಳೆದ ಹತ್ತು ವರುಷಗಳಲ್ಲಿ) ಯಕ್ಷಗಾನ/ತಾಳಮದ್ದಲೆ ಪ್ರದರ್ಶನಗಳು ಸಂಪನ್ನವಾಗಿದೆ. ಹಾಗಾದರೆ ಕಳೆದ ೬/೭ ಶತಮಾನಗಳಿಂದ ಪ್ರದರ್ಶನಗೊಳ್ಳುತ್ತಿರುವ ಯಕ್ಷಗಾನವು ಇಲ್ಲಿಯವರೆಗೆ ಒಟ್ಟು ಪ್ರದರ್ಶನಗಳನ್ನು ನೀಡಿರಬಹುದು? ಆ ಪ್ರದರ್ಶನಗಳಿಂದ ಸಮಾಜದಲ್ಲಿ ಆದ ಬದಲಾವಣೆಗಳೇನು? ಇದು ಕನ್ನಡ ಸಾಹಿತ್ಯವನ್ನು ಬಳಸಿಕೊಂಡು ಸೃಷ್ಟಿಸಿದ ತಲ್ಲಣಗಳೇನು? ಸಾಂಸ್ಕೃತಿಕ, ಕಲೆ ಹಾಗೂ ಭಾಷೆಯ ಬಗೆಗಿನ ಬೆಳೆಸಿದ ಸಂಸ್ಕಾರಗಳ ಪ್ರಭಾವಗಳೇನು? ಇಂದು ನಾವು ಕನ್ನಡ ಅಸ್ಮಿತೆಯ ಬಗೆಗೆ ಮಾತುಗಳನ್ನು ಆಡುತ್ತೇವೆ. ಆದರೆ ಯಕ್ಷಗಾನ ಪ್ರದರ್ಶನಗೊಳ್ಳುವ ಪ್ರದೇಶಗಳಲ್ಲಿ ಕನ್ನಡ ಜೀವಂತವಾಗಿರುವುದಕ್ಕೆ ಹಾಗೂ ಶತಮಾನಗಳಿಂದ ಅದು ಸಂಸ್ಕಾರಯುತವಾಗಿ ಬೆಳೆಯುವುದಕ್ಕೆ ಯಕ್ಷಗಾನದ ಕೊಡುಗೆಗಳಿವೆ.



ರವಿ ಮಡೋಡಿ

ಇಂಥ ಶುದ್ದ ಮತ್ತು ಸಮೃದ್ಧವಾದ ಕನ್ನಡ ಸಾಹಿತ್ಯದ ಪರಂಪರೆ ಕರ್ನಾಟಕದಲ್ಲಿ ಮನೆಮಾತಗಿದೆಯೇ ಎಂಬ ಪ್ರಶ್ನೆ ಕೇವಲ ಪ್ರಶ್ನೆಯಾಗಿಯೇ ಉಳಿಯುತ್ತದೆ. ಕನ್ನಡ ಸಾಹಿತ್ಯದ ಬೆಳವಣಿಗೆಗೆ ಇರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ ಇದನ್ನು ಕನ್ನಡ ಸಾಹಿತ್ಯವೆಂದು ಗಂಭೀರವಾಗಿ ಪರಿಗಣಿಸದ ಹಾಗೆ ಕಾಣಿಸುವುದಿಲ್ಲ. ತನ್ನ ಯಾವುದೇ ಚಟುವಟಿಕೆಗಳಲ್ಲಿ ಇದಕ್ಕೆ ಸ್ಥಾನವನ್ನು ನೀಡದೆ ಇರುವುದು ಸೋಜಿಗವೆನಿಸುತ್ತದೆ. ಕನ್ನಡ ಅಸ್ಮಿತೆಯನ್ನು ಬಹಳ ಪರಿಣಾಮಕಾರಿಯಾಗಿ ಉಳಿಸುವುದಕ್ಕೆ ಯಕ್ಷಗಾನಕ್ಕೆ ವಿಪುಲವಾದ ಅವಕಾಶಗಳಿರುವುದನ್ನು ಎಂದಿಗೂ ಮರೆಯುವ ಹಾಗಿಲ್ಲ. ಈ ನಿಟ್ಟಿನಲ್ಲಿ ಸರ್ಕಾರ ಹಾಗೂ ಸಂಸ್ಥೆಗಳು ಯಕ್ಷಗಾನವನ್ನು ಬಳಸಿಕೊಳ್ಳಬಹುದಾಗಿದೆ. ಜೊತೆಗೆ ತನ್ನದೇ ವಿಶಿಷ್ಟ ಛಂದಸ್ಸು ಹೊಂದಿರುವ ಯಕ್ಷಗಾನ ಸಾಹಿತ್ಯದ ರಚನೆಯ ಹಾಗೂ ಮಟ್ಟಿನ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆಗಳಾಗಬೇಕು ಹಾಗೂ ಯಕ್ಷ ಸಾಹಿತ್ಯಕ್ಕೆ ಕನ್ನಡ ಸಾಹಿತ್ಯದಂತೆ ಪ್ರಶಸ್ತಿ, ಪುರಸ್ಕಾರಗಳು, ಮನ್ನಣೆಗಳು ಸಿಕ್ಕಾಗ ಮಾತ್ರ ಇದರ ಬೆಳವಣಿಗೆ ಸಾಧ್ಯವಾಗುತ್ತದೆ. – **ಮುಗಿಯಿತು**

***ಪುರಾಣ ಮಾಹಿತಿ*** – ರಾಮ ಲಕ್ಷ್ಮಣರ ನಂತರ ಅವರ ಮಕ್ಕಳಿಗೆ ಯಾವ ರಾಜ್ಯವನ್ನು ಹಂಚಿದರು ಎಂಬ ಬಗ್ಗೆ ಕುತೂಹಲಗಳಿವೆ. ಈ ಹಿನ್ನಲೆಯಲ್ಲಿ ಎಲ್ಲರಿಗಾಗಿ ಈ ವಿವರಗಳು. ಇವು ಅಯೋಧ್ಯೆಯ ಭಾಗಗಳೇ ಇರಬಹುದು ಎಂಬ ಪುರಾವೆಗಳು ಲಭಿಸುತ್ತವೆ. ಅದರಂತೆ,

1. ರಾಮನ ಮಕ್ಕಳಾದ ಕುಶ ಲವರಿಗೆ ಕುಶಾವತಿ ಹಾಗೂ ಶ್ರಾವಸ್ಥಿ.
2. ಭರತನ ಮಕ್ಕಳಾದ ಪುಷ್ಕರ ಹಾಗೂ ತಕ್ಷನಿಗೆ ಪುಷ್ಕರಾವತಿ ಹಾಗೂ ತಕ್ಷಶಿಲಾ
3. ಲಕ್ಷ್ಮಣನ ಮಕ್ಕಳಾದ ಅಂಗದ ಹಾಗೂ ಚಂದ್ರಕೇತನಿಗೆ ತಾರಾಪಥ ಹಾಗೂ ಚಂದ್ರಕಾಂತಾ ನಗರ.
4. ಶತೃಘ್ನನ ಮಕ್ಕಳಾದ ಸುಬಾಹು ಹಾಗೂ ಶತ್ರುಘಾತಿಗೆ ಮದುರಾ ನಗರಿ ಹಾಗೂ ವೈದಿಶ ನಗರ. (ಅನುಕ್ರಮವಾಗಿ)

***ಸಂಗ್ರಹ – ದಾಮೋದರ ಶೆಟ್ಟಿ, ಇರುವೈಲು***

**ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9449686807 ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು**

## ಕಾಡುವ ಪಾತ್ರ/ ಪ್ರಸಂಗ/ ಸನ್ನಿವೇಶ

ಕಲಾವಿದರ ಯಕ್ಷಾನುಭವದ ಪ್ರಮುಖ ನೆನಪು/ಘಟನೆಗಳನ್ನು ದಾಖಲೀಕರಿಸುವ ಅಂಕಣ ಇದು. ಪ್ರತೀ ಸಂಚಿಕೆಯಲ್ಲಿ ಇಬ್ಬರು ಕಲಾವಿದರ ಅನುಭವಗಳನ್ನು ಇಲ್ಲಿ ಸಾದರಪಡಿಸುತ್ತಿದ್ದೇವೆ. ಈ ತಿಂಗಳ ಸಂಚಿಕೆಯಲ್ಲಿ ಯಕ್ಷಗಾನ ಪ್ರಾಚಾರ್ಯರಾದ ***ಕೆಪಿ ಹೆಗಡೆ*** ಹಾಗೂ ಧರ್ಮಸ್ಥಳ ಮೇಳದ ಕಲಾವಿ***ದರಾದ ಚಿದಂಬರ ಬಾಬುರವರ*** ಅನುಭವಗಳ ತುಣುಕು ಪ್ರಕಟವಾಗಿದೆ.

***ಕಲಾವಿದರು: ಕೆಪಿ ಹೆಗಡೆ***

**ತಂದೆ – ಪರಮೇಶ್ವರ ಹೆಗಡೆ**

**ತಾಯಿ – ತುಂಗಭದ್ರಾ ಹೆಗಡೆ**

**ಹೆಂಡತಿ – ಲಲಿತಾ ಹೆಗಡೆ**

**ಮಕ್ಕಳು – ವಿನಯ್ ಮತ್ತು ಸಹನಾ**

**ಗುರುಗಳು – ನಾರ್ಣಪ್ಪ ಉಪ್ಪೂರು**



ಯಕ್ಷಗಾನ ರಂಗದ ಗಾನ ಕೋಗಿಲೆಯೆಂದೇ ಹೆಸರುವಾಸಿಯಾದ ಕೆ.ಪಿ. ಹೆಗಡೆಯವರ ಪೂರ್ಣ ಹೆಸರು ಕೃಷ್ಣ ಪರಮೇಶ್ವರ ಹೆಗಡೆ. ಕೆ.ಪಿ. ಹೆಗಡೆ ಅವರು ಪ್ರೌಢ ಶಾಲಾ ಶಿಕ್ಷಣವನ್ನು ಮುಗಿಸಿದ ನಂತರ, ಮನೆಯ ಹತ್ತಿರದ ಐನ್ ಬೈಲ್ ಗಣಪತಿ ಭಟ್ಟರ ಮನೆಯಲ್ಲಿ ಮಂಜುನಾಥ ಭಾಗವತರು ನೆದೆಸುತ್ತಿದ್ದಂತಹ ತರಗತಿಗೆ ಸೇರಿ ಮೊದಲು ತಾಳ ಅಭ್ಯಾಸವನ್ನು ಮಾಡಿದರು. ಇವರಲ್ಲಿನ ಕಲೆ ಇಷ್ಟಕ್ಕೆ ಸೀಮಿತವಾಗದೆ ಯಕ್ಷಗಾನದಲ್ಲಿ ವೇಷ ಕಟ್ಟಿ ಕೆಲವು ಪಾತ್ರಗಳನ್ನೂ ನಿರ್ವಹಿಸಿದ್ದಾರೆ. ನಂತರದ ದಿನಗಳಲ್ಲಿ ಹಂಗಾರಕಟ್ಟೆ ಯಕ್ಷಗಾನ ಕೇಂದ್ರದಲ್ಲಿ ಆಚಾರ್ಯ ನಾರ್ಣಪ್ಪ ಉಪ್ಪೂರರ ಹತ್ತಿರ ಶಿಷ್ಯರಾಗಿ ಕಲಿತು, ರಂಗಪ್ರವೇಶವನ್ನು ಮಾಡಿದರು. ಮಂದಾರ್ತಿ ಮೇಳ, ಹಂಗಾರಕಟ್ಟೆ ಮೇಳ, ಸಾಲಿಗ್ರಾಮ ಮೇಳ , ಪೆರ್ಡೂರು ಮೇಳ , ಕೋಟ ಮಹಾಲಿಂಗೇಶ್ವರ ಮೇಳ , ಕಮಲಶಿಲೆ ಮೇಳ , ಪಂಚಲಿಂಗೇಶ್ವರ ಮೇಳ , ಮಾರಿಕಾಂಬಾ ಮೇಳ ಹೀಗೆ ಹಲವು ಮೇಳಗಳಲ್ಲಿ ತೊಡಗಿಸಿಕೊಂಡು ತಮ್ಮಲ್ಲಿರುವ ಕಲೆಯನ್ನು ವೈಭವೀಕರಿಸುತ್ತಾ ಸಾಗಿದ್ದಾರೆ. ಜಿಲ್ಲಾ ಪ್ರಶಸ್ತಿ, ಯಕ್ಷಗಾನ ಅಕಾಡೆಮಿಯ ಪ್ರಶಸ್ತಿ, ಕಾಳಿಂಗನಾವಡ ಪ್ರಶಸ್ತಿ, ನಾರಣಪ್ಪ ಉಪ್ಪೂರ ಪ್ರಶಸ್ತಿ ಹೀಗೆ ಅನೇಕ ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಕಾಳಿಂಗ ನಾವಡರ ಜೊತೆ ಒಡನಾಟವನ್ನು ಹೊಂದಿದಂತಹ ಇವರು ಕಾಳಿಂಗ ನಾವಡರಿಂದ ಹಲವಾರು ವಿಷಯಗಳನ್ನು ಕಲಿತಿದ್ದೇನೆ, ಕಾಳಿಂಗ ನಾವಡರು ಅತ್ಯಂತ ಸರಳ ವ್ಯಕ್ತಿ ಎಂದು ಹೇಳಿಕೊಂಡಿದ್ದಾರೆ. ಸುರೇಶ್, ರಾಜೇಂದ್ರ ಮಯ್ಯ, ಹೀಗೆ ಹಲವಾರು ಶಿಷ್ಯರು ಇವರ ಪರಂಪರೆಯನ್ನು ಮುನ್ನಡೆಸುತ್ತಾ ಬಂದಿದ್ದಾರೆ. ಹೊಸ ಪ್ರಸಂಗಳನ್ನು ಹಾಗೂ ಹಳೆಯ ಪ್ರಸಂಗಗಳಿಗು ವ್ಯತ್ಯಾಸವಿದೆ, ಹಳೆಯ ಪ್ರಸಂಗಗಳು ರಾಮಾಯಣ, ಮಹಾಭಾರತ, ಭಗವತದಂತಹ ಆಧಾರಗಳನ್ನು ಹೊಂದಿರುತ್ತಿದ್ದವು. ಈಗಿನ ಪ್ರಸಂಗಗಳು ಸಾಮಾಜಿಕ ಕಥೆಗಳನ್ನು ಆಧರಿಸಿರುತ್ತದೆ, ಅವುಗಳು ಹೆಚ್ಚಿನವರಿಗೆ ರುಚಿಸುವುದಿಲ್ಲ ಎಂಬುದಾಗಿ ಹೇಳುತ್ತಾರೆ ಕೆ.ಪಿ. ಹೆಗಡೆ ಅವರು. ಯಕ್ಷಗಾನ ರಂಗಕ್ಕೆ ನಿಮ್ಮಿಂದ ನಿರೀಕ್ಷಸಬಹುದಾದ ಕೊಡುಗೆ ಏನು ಎಂಬ ಪ್ರಶ್ನೆಗೆ ಯಕ್ಷಗಾನವನ್ನು ಯುವಪೀಳಿಗೆಗೆ ಕಲಿಸಿ, ಯಕ್ಷಗಾನ ಕಲೆ ನಶಿಸದಂತೆ ಕಾಪಾಡುವುದೇ ನನ್ನ ಕೊಡುಗೆ ಎಂದು ಹೇಳಿದ್ದಾರೆ. – **ಸಂದರ್ಶನ: ಅನನ್ಯ ಆರ್**

**ಕಲಾವಿದರು – ಚಿದಂಬರ ಬಾಬು**

**ತಂದೆ – ನಾಗೇಶ್ ರಾವ್**

**ತಾಯಿ – ರತ್ನಮ್ಮ**

**ಜನ್ಮ ದಿನಾಂಕ – ೨೩–೪–೧೯೬೧**

**ಹುಟ್ಟಿದ ಸ್ಥಳ –ಹಿತ್ತಲಸರ ತೀರ್ಥಹಳ್ಳಿ ತಾಲೂಕು**

**ಧರ್ಮಪತ್ನಿ – ಪಾರ್ವತಿ**

**ಮಕ್ಕಳು – ಕಾರ್ತಿಕ ಕೌಶಿಕ**

**ಮೊದಲು ಸೇವೆ ಸಲ್ಲಿಸಿದ ಮೇಳ ಹಾಗೂ ಇಸವಿ – ಸುಂಕದಕಟ್ಟೆ ೧೯೮೦–೮೧ರಲ್ಲಿ**

**ಯಕ್ಷಗಾನದ ಗುರುಗಳು – ಕೆ ಗೋವಿಂದ ಭಟ್**



ತೀರ್ಥಹಳ್ಳಿ ತಾಲೂಕಿನ ಹಿತ್ತಲಸರ ಗ್ರಾಮದವರಾದ **ಚಿ**ದಂಬರ ಬಾಬು ಪ್ರಸ್ತುತ ಧರ್ಮಸ್ಥಳ ಮೇಳದ ಹಿರಿಯ ಯಕ್ಷಗಾನ ಕಲಾವಿದರಾಗಿ ಕಳೆದ ಏಳು ವರ್ಷಗಳಿಂದ ದುಡಿಯುತ್ತಿದ್ದಾರೆ. ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಯಕ್ಷಗಾನದ ಹೆಜ್ಜೆಗಾರಿಕೆಯನ್ನು ಅಭ್ಯಾಸ ಮಾಡಿರುವ ಇವರು ನಂತರ ಸುಂಕದಕಟ್ಟೆ ಮೇಳದಲ್ಲಿ ಸುಮಾರು ೩೫ ವರ್ಷಗಳ ಕಾಲ ಬಣ್ಣದ ಬದುಕನ್ನು ಕಳೆದಿದ್ದಾರೆ. ಆರಂಭದ ದಿನಗಳಲ್ಲಿ ನಾಟಕಗಳಲ್ಲಿ ಪಾತ್ರ ಮಾಡುತ್ತಿದ್ದ ಇವರು ಕಾಳಿಂಗ ನಾವುಡರ ಭಾಗವತಿಕೆಯ ಆಕರ್ಷಣೆಯಿಂದ ಸತತವಾಗಿ ಎಂಟು ದಿನಗಳ ಕಾಲ ತಮ್ಮ ಹಳ್ಳಿಯಲ್ಲಿ ಕಾರ್ಯಕ್ರಮ ವೀಕ್ಷಣೆ ಮಾಡಿದ್ದರಂತೆ. ಹೀಗೆ ನಾವುಡರ ಪ್ರಭಾವಕ್ಕೆ ಒಳಗಾಗಿ ಯಕ್ಷಗಾನ ಕಲಿಯಲೇಬೇಕು ಎಂಬ ನಿರ್ಧಾರಕ್ಕೆ ಬರುತ್ತಾರೆ. ಹಾಗೆಯೇ ಪುಟ್ಟ ಅಂಡಿಯಲ್ಲಿ ಚಹಾ ಕುಡಿಯುತ್ತಿದ್ದಾಗ ಒಂದು ಸುದ್ದಿ ಅವರ ಕಣ್ಣಿಗೆ ಬೀಳುತ್ತದೆ. ಧರ್ಮಸ್ಥಳದ ಲಲಿತ ಕಲಾ ಕೇಂದ್ರದಲ್ಲಿ ಯಕ್ಷಗಾನ ಕಲಿಸಲಾಗುತ್ತಿದೆ. ಆಸಕ್ತರು ಅರ್ಜಿ ಹಾಕಬಹುದು ಎಂಬ ಮಾಹಿತಿಯನ್ನು ತಿಳಿದುಕೊಂಡು ಕೇಂದ್ರದಲ್ಲಿ ನಡೆಯುತ್ತಿದ್ದ ಸಂದರ್ಶನಕ್ಕೆ ಹಾಜರಾಗುತ್ತಾರೆ. ಬಡಗಿನ ಯಕ್ಷಗಾನಕ್ಕೆ ಆಕರ್ಷಿತರಾದ ಅವರು ತೆಂಕುತಿಟ್ಟಿನ ಕಲಿಕಾ ಕೇಂದ್ರಕ್ಕೆ ಸೇರ್ಪಡೆಯಾಗುತ್ತಾರೆ. ಅಲ್ಲಿ ಆ ಸಮಯದಲ್ಲಿ ಯಕ್ಷಗಾನದ ಗುರುವಾಗಿದ್ದ ಕೆ. ಗೋವಿಂದ ಭಟ್ ರವರಲ್ಲಿ ಪ್ರಾಥಮಿಕ ಹೆಜ್ಜೆಯ ಅಭ್ಯಾಸ ನಡೆಸುತ್ತಾರೆ. ನಂತರ ಕಟೀಲು ಮೇಳಕ್ಕೆ ಸೇರಬೇಕೆಂದುಕೊಂಡವರನ್ನು ನಿಡ್ಲೆ ನರಸಿಂಹ ಭಟ್ ರವರು ೧೯೮೦–೮೧ ರಲ್ಲಿ ಸುಂಕದಕಟ್ಟೆ ಮೇಳಕ್ಕೆ ಸೇರಿಸುತ್ತಾರೆ. ಅಲ್ಲಿಂದ ೩೫ ವರ್ಷಗಳ ಕಾಲ ಸುಂಕದಕಟ್ಟೆ ಮೇಳದಲ್ಲಿ ತಿರುಗಾಟ ನಡೆಸಿ ಸದ್ಯ ಧರ್ಮಸ್ಥಳ ಮೇಳದಲ್ಲಿ ಸಂತೃಪ್ತ ಕಲಾಯಾನ ಮುಂದುವರೆಸುತ್ತಿದ್ದಾರೆ. ನಾಟಕದಲ್ಲಿ ಪಾತ್ರ ಮಾಡುತ್ತಿದ್ದ ದಿನಗಳಲ್ಲಿ ಪುಟ್ಟರಾಜ ಗವಾಯಿಯವರಲ್ಲಿ ತಬಲಾ ವಾದನವನ್ನೂ ಇವರು ಅಭ್ಯಸಿಸಿದ್ದಾರೆ.

***ತಮ್ಮ ಕಲಾಯಾನದ ಆರಂಭದ ದಿನಗಳನ್ನು ಮೆಲುಕು ಹಾಕುವ ಇವರು ಹೇಳುವುದು ಹೀಗೆ..***

***ಚಿಂದಂಬರ ಬಾಬು:*** ನನ್ನಲ್ಲಿ ಮಾತನಾಡುವ ಕಲೆ, ಶಿಸ್ತು ಬೆಳೆಯಲು ಯಕ್ಷಗಾನ ಕಲೆ ತುಂಬಾ ಸಹಕಾರಿಯಾಯಿತು. ಧರ್ಮಸ್ಥಳ ಕೇಂದ್ರಕ್ಕೆ ಸೇರುವ ಸಂದರ್ಭದಲ್ಲಿ ನನ್ನ ಮಾತಿನಲ್ಲಿ ಶಿಸ್ತು ಎಂಬುದಿರಲಿಲ್ಲ. ಆಗಿನ ದಿನಗಳನ್ನು ನೆನೆಸಿಕೊಂಡರೆ ಆಗ ಮಾತನಾಡುತ್ತಿದ್ದ ರೀತಿಗಳು ಸರಿ ಇಲ್ಲ

ಎಂದು ಈಗನಿಸುತ್ತದೆ. ಕೇಂದ್ರದಲ್ಲಿ ಯಕ್ಷಗಾನ ಕಲಿಕೆಯ ಆಯ್ಕೆಯ ಸಂದರ್ಭದಲ್ಲಿ ನನಗೆ ರಾಮಾಯಣದ ಸನ್ನಿವೇಶವೊಂದನ್ನು ಓದಲು ನೀಡಿದರು. ನಾಟಕದ ಅಭ್ಯಾಸ ಇದ್ದುದರಿಂದ ಅದನ್ನು ನಾನು ಚೆನ್ನಾಗಿ ಪ್ರಸ್ತುತ ಪಡಿಸಿದೆ. ರಾವಣ ಹನುಮಂತ ಮೊದಲಾದ ಪಾತ್ರಗಳಲ್ಲಿ ಪ್ರಬೇಧ ಇಟ್ಟು ಮಾತನಾಡಿದೆ. ಇದು ಅವರಿಗೆ ಮೆಚ್ಚುಗೆಯಾಗಿರಬಹುದು. ಹೀಗೆ ಕೇಂದ್ರದಲ್ಲಿ ಯಕ್ಷಗಾನ ಕಲಿಕೆಗೆ ಆಯ್ಕೆಯಾದೆ. ನಂತರ ಶ್ರೀ ನಿರಂಜನ ಸ್ವಾಮೀಜಿಯವರ ಯಜಮಾನಿಕೆ ಹಾಗೂ ಸುಂದರ ಶೆಟ್ಟಿ ನೇತೃತ್ವದ ಸುಂಕದಕಟ್ಟೆ ಮೇಳ ನನ್ನನ್ನು ಬಹಳಷ್ಟು ಬೆಳೆಸಿತು. ಯಕ್ಷಗಾನ ಕಲೆಗೆ ನಿಗದಿತ ಶಿಕ್ಷಣ ಕ್ರಮ ಎಂಬುದಿಲ್ಲ. ಇಂತಿಷ್ಟೇ ವರ್ಷ ಕಲಿಯಬೇಕು ಎಂಬುದೂ ಇಲ್ಲ. ನಾನು ಧರ್ಮಸ್ಥಳ ಕೇಂದ್ರದಲ್ಲಿ ೫ ತಿಂಗಳು ಹೆಜ್ಜೆಗಾರಿಕೆಯ ಅಭ್ಯಾಸ ಮಾಡಿದೆ. ಕಲಾವಿದನಾದವನಿಗೆ ಕಲಿತ ಕೇಂದ್ರ ಮಾತ್ರವಲ್ಲ. ಯಾವ ಮೇಳಕ್ಕೆ ಸೇರಿದ್ದೇವೆ ಅಲ್ಲಿ ಯಾರ ಒಡನಾಟ ಇದೆಯೋ ಅದೇ ದೊಡ್ಡ ಕೇಂದ್ರ. ತಿರುಗಾಟದ ಅವಧಿಯಲ್ಲಿ ಗುರುಗಳಂತಿದ್ದ, ಯಕ್ಷಗಾನದ ಶಬ್ದಕೋಶದಂತಿದ್ದ ಕಟೀಲು ಶ್ರೀನಿವಾಸ ರಾವ್, ನನ್ನ ಬೆಳವಣಿಗೆಗೆ ತುಂಬ ನೆರವಾದರು. ಸುಂಕದಕಟ್ಟೆ ಮೇಳದಲ್ಲಿ ಪುತ್ತಿಗೆ ತಿಮ್ಮಪ್ಪ ರೈ, ಪದ್ಯಾಣ ಶಂಕರ ನಾರಾಯಣ್ ಭಟ್ ನನ್ನನ್ನು ತಿದ್ದಿ ತೀಡಿ ಬೆಳೆಸಿದರು. ಸುಂಕದಕಟ್ಟೆ ಮೇಳಕ್ಕೆ ಸೇರಿದಾಗ ಡ್ರೆಸ್ ಮಾಡಲು ನೆರವಾಗುವುದು, ಮಡಚುವುದು, ಚೌಕಿ ಹಾಕುವುದು ಅಡುಗೆ ಕೆಲಸ, ರಂಗಸ್ಥಳ ಕಟ್ಟುವುದು ಎಲ್ಲ ಕೆಲಸವನ್ನೂ ನಾನು ಮಾಡಿದವ. ಅಲ್ಲಿನ ಹಿರಿಯ ಕಲಾವಿದರು ಈತ ಮೂರು ದಿನದಲ್ಲಿ ಮೇಳ ಬಿಟ್ಟು ಬಿಡುತ್ತಾನೆ ಎಂಬ ಮಾತುಗಳನ್ನಾಡಿದರು. ಆದರೆ ನಾನು ತಿರುಗಾಟದ ೧೮೦ ದಿನದಲ್ಲಿ ಒಂದೂ ರಜೆ ಮಾಡದೇ ಮೇಳದಲ್ಲಿ ಉಳಿದುಕೊಂಡೆ. ಮರೆಯದ ನೆನಪು ಎಂದರೆ ಕಟೀಲು ಶ್ರೀನಿವಾಸ್ ರಾವ್ ಅವರು ತಮ್ಮ ಅಂತಿಮ ಕ್ಷಣಗಳನ್ನು ನನ್ನ ಹೆಗಲ ಮೇಲೆ ಮಲಗಿಯೇ ಮೃತರಾದರು ಅವರಿಗೆ ರಂಗಸ್ಥಳದಲ್ಲಿ ಹಾರ್ಟ್ ಅಟಾಕ್ ಆಗಿ ಪ್ರಾಣ ತ್ಯಜಿಸಿದ್ರು. ಅಷ್ಟೊಂದು ಆಪ್ತತೆ ಅವರೊಂದಿಗಿತ್ತು.

***ಮನೆಯ/ ಕುಟುಂಬದವರ ಬೆಂಬಲ***

***ಚಿಂದಂಬರ ಬಾಬು:*** ಯಕ್ಷಗಾನಕ್ಕೆ ಹೊರಡುವಾಗ ತಂದೆಗೆ ಇಷ್ಟ ಇರಲಿಲ್ಲ. ಅವರಿಗೆ ಕುಟುಂಬದ ಜಮೀನು ನೋಡಿಕೊಳ್ಳಬೇಕೆಂಬ ಹಂಬಲ ಇತ್ತು. ನಾನು ಸಾರ್ವತ್ರಿಕ ಬದುಕಿಗೆ, ಸಾಂಸ್ಕೃತಿಕ ಬದುಕಿಗೆ ಒಗ್ಗಿಕೊಂಡೆ. ಆದರೆ ತಾಯಿಯ ಸಪೋರ್ಟ್ ತುಂಬ ಇತ್ತು. ತಾಯಿಯವರು ನಾನು ಕೇಂದ್ರದಲ್ಲಿ ಕಲಿಯುವಾಗ ೧೦ ರುಪಾಯಿ ಕಳಿಸ್ತಾ ಇದ್ರು. ತುಂಬ ದಿನಗಳಾದ ಮೇಲೆ ನಾನು ಜನಾನುರಾಗ ಸಂಪಾದನೆ ಮಾಡಿದ್ದರ ಬಗ್ಗೆ ತಂದೆಯವರಿಗೆ ಅತೀವ ಸಂತೋಷವಿತ್ತು ಅದನ್ನು ಅವರು ಮಾತಿನಲ್ಲಿಯೂ ಹೇಳಿದ್ದರು. ಆ ಆರಂಭದ ದಿನಗಳಲ್ಲಿ ತಾಯಿ ಕಳುಹಿಸುತ್ತಿದ್ದ ೧೦ ರುಪಾಯಿ ಹಾಗೂ ದನಿಗಳು ಕೊಟ್ಟ ಆಶ್ರಯ ಯಾವತ್ತೂ ಮರೆಯುವಂಥದ್ದಲ್ಲ. ಕಳೆದ ಏಳು ವರ್ಷಗಳಲ್ಲಿ ಮನೆ ಬದುಕು ಹೆಸರು, ಸಂತೃಪ್ತಿಯ ಜೀವನ ಈ ಕಲೆಯಿಂದ ಸಿಕ್ಕಿದೆ. ಅದಕ್ಕೆ ಮೊದಲು ತುಂಬ ಕಷ್ಟ ಅನುಭವಿಸಿದ್ದೇನೆ. ಈಗ ನನ್ನ ಕಲಾಸೇವೆಗೆ ತಕ್ಕ ಪ್ರತಿಫಲ ದೊರಕಿದೆ ಎಂದು ಸಂತೃಪ್ತಿಯಿಂದ ನುಡಿಯುತ್ತಾರೆ.

***ಹೆಸರು ತಂದುಕೊಟ್ಟ ಪಾತ್ರಗಳು***

***ಚಿಂದಂಬರ ಬಾಬು***: ಪಾತ್ರಕ್ಕೆ ವಂಚನೆ ಆಗಬಾರದು, ನೋಡುವವರಿಗೂ ವಂಚನೆ ಆಗಬಾರದು. ಎಂದು ನನ್ನ ಭಾವನೆ. ಯಾವುದೇ ಪಾತ್ರಗಳನ್ನು ಇಷ್ಟ ಪಟ್ಟು ಮಾಡುತ್ತೇನೆ.  ಕೋಟಿ, ಕಾಂತಬಾರೆ, ಮಲ್ಲಯ್ಯ ಬುದ್ದಿವಂತ ಇಂತಹ ಪಾತ್ರಗಳಲ್ಲದೆ ಬೇರೆ ಕಲಾವಿದರು ಹಗುರವಾಗಿ ಬಿಟ್ಟ ಪಾತ್ರಗಳಾದರೂ ಅದಕ್ಕೆ ಜೀವ ತುಂಬಲು ಪ್ರಯತ್ನ ಪಡುತ್ತೇನೆ. ಉದಾಹರಣೆಗೆ – ತಾರಾನಾಥ ಬಲ್ಯಾಯರ ಬ್ರಹ್ಮ ವೈದ್ಯರು ಪ್ರಸಂಗದ ಒಲಿಬಾಲೆ ಎಂಬ ವೇಷ – ಅಶ್ಲೀಲ ತುಂಬಿದ ಪಾತ್ರವದು. ಆ ಪಾತ್ರಕ್ಕೆ ಅಶ್ಲೀಲವನ್ನು ಅಳಿಸಿ ಜೀವ ಕೊಟ್ಟ ಧನ್ಯತೆ ನನಗಿದೆ. ನಾನು ರಂಗಸ್ಥಳದಲ್ಲಿ ಅಶ್ಲೀಲಗಳನ್ನು ಮೆಚ್ಚುವುದಿಲ್ಲ. ವಿಕಾರವಾದ ನಾಟ್ಯ ಸಂಭಾಷಣೆ ಹಿಡಸುವುದಿಲ್ಲ. ನನ್ನ ಪಾತ್ರ ನಿರ್ವಹಣೆ ಯಾರಿಗೆ ಸಲ್ಲದೇ ಇದ್ದರೂ ನನಗೆ ಚಿಂತೆ ಇಲ್ಲ. ಆದರೆ ಅಂಥದ್ದನ್ನು ನಾನು ಮಾಡುವುದಿಲ್ಲ.

***ಪಾತ್ರದ ತಯಾರಿ***

***ಚಿಂದಂಬರ ಬಾಬು***: ಮೇಳದಲ್ಲಿ ಹಿರಿಯ ಕಲಾವಿದರ ಅನುಭವಗಳನ್ನು ಕೇಳಿಕೊಳ್ಳುವುದು, ನಮ್ಮ ಅನುಭವಗಳನ್ನು ಅದರಲ್ಲಿ ಮಿಳಿತಗೊಳಿಸುವುದು. ನನ್ನ ಅಧ್ಯಯನದ ರೀತಿ. ಇನ್ನೊಬ್ಬರ ಅನುಭವವೇ ಪರಿಪೂರ್ಣ ಅಲ್ಲ. ಅದಕ್ಕೆ ನಮ್ಮತನವನ್ನೂ ಸೇರಿಸಬೇಕು. ತಿಳಿಯದೇ ಇರುವುದನ್ನು ಬಲ್ಲವರಿಂದ ತಿಳಿದುಕೊಳ್ಳಬೇಕು.

***ಯಕ್ಷಗಾನದ ಇತ್ತೀಚಿನ ಬೆಳವಣಿಗೆ ಬಗ್ಗೆ ಹೇಳಿ***

***ಚಿಂದಂಬರ ಬಾಬು***: ಯಕ್ಷಗಾನ ಬೆಳಗ್ಗಿನವರೆಗೆ ನಡೆಯಲೇ ಬೇಕು ಎಂದೆನ್ನುವುದು ಸರಿಯಲ್ಲ ಎಂದು ನನ್ನ ಅನಿಸಿಕೆ. ಯಾರು ಈ ರೀತಿಯಾಗಿ ವಾದಿಸುತ್ತಾರೋ ಅವರೇ ಯಕ್ಷಗಾನ ನೋಡುವುದಿಲ್ಲ. ಇದು ನನ್ನ ಅನುಭವ. ಕುರುಕ್ಷೇತ್ರ, ಕರ್ಣ ಪರ್ವ, ಕುಮಾರ ವಿಜಯ, ಪ್ರಸಂಗ ಇಡೀ ರಾತ್ರಿ ಮಾಡಿ ಎನ್ನುವವರನ್ನು ನೀವು ಬೆಳಿಗ್ಗೆವರೆಗೆ ಇರ್ತೀರ? ಎಂದು ಕೇಳಿದರೆ, ನನಗೆ ಯಕ್ಷಗಾನದಲ್ಲಿ ಆಸಕ್ತಿ ಉಂಟು. ಆದ್ರೆ ನಿದ್ರೆ ಬಿಟ್ರೆ ಆಗುವುದಿಲ್ಲ ಎಂದು ಹೇಳುವವರೇ ಹೆಚ್ಚು. ಹಾಗಾದ್ರೆ ಇಡೀ ರಾತ್ರಿ ಮಾಡುವ ಯಕ್ಷಗಾನ ಯಾರು ನೊಡಬೇಕು? ಆಡಿಸುವವರೂ ಇಡೀ ರಾತ್ರಿ ನೋಡುವುದಿಲ್ಲ. ಮಂಗಳ ಆಗುವ ಹೊತ್ತಿಗೆ ಬಂದರೆ ಸಾಕಲ್ವಾ ಎಂದು ಕೇಳುವವರೇ ಹೆಚ್ಚು. ಹಾಗಾದರೆ ಕಲಾವಿದರಿಗಾಗಿ ಆಟವಾ.. ಇದರಿಂದಾಗಿ ಕಾಲಮಿತಿ ಯಕ್ಷಗಾನವನ್ನು ಎಲ್ಲರೂ ಸ್ವೀಕರಿಸಲೇಬೇಕು.

***ಉತ್ತಮವಲ್ಲದ ಬೆಳವಣಿಗೆ***

***ಚಿಂದಂಬರ ಬಾಬು***: ಕಲಾವಿದನಾದವ ನಾನು ಇಂಥದ್ದೇ ಪಾತ್ರ ಮಾಡ್ತೇನೆ ಎನ್ನುವ ಪ್ರವೃತ್ತಿ ಬದಲಾಗ್ಬೇಕು.

## ನಮ್ಮ ಲೈಬ್ರರಿ – ಹಟ್ಟಿಯಂಗಡಿ ರಾಮಭಟ್ಟ ಭಟ್ಟರು (1794-1854) – ಕವಿ ಹಾಗೂ ಕೃತಿ ಪರಿಚಯ

ಹಟ್ಟಿಯಂಗಡಿ ರಾಮಭಟ್ಟರು ಕುಂದಾಪುರ ತಾಲೂಕಿನ ಹಟ್ಟಿಯಂಗಡಿಯವರು. 1794 ಆನಂದ ನಾಮ ಸಂವತ್ಸರ ಇವರ ಜನ್ಮಕಾಲವೆಂದು ಯಕ್ಷಗಾನ ವಿದ್ವಾಂಸರು ತಿಳಿಸಿದ್ದಾರೆ. ಇವರ ತಂದೆ ಸೂರಭಟ್ಟ. ಇಂದಿಗೂ ಇವರ ಮನೆತನದವರು ಹಟ್ಟಿಯಂಗಡಿಯಲ್ಲಿ ದೇವಸ್ಥಾನದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ತಮ್ಮ ಕೃತಿಗಳಲ್ಲಿ ಹಟ್ಟಿಯಂಗಡಿ ಲೋಕನಾಥೇಶ್ವರನ ಸ್ಥಿತಿ ಕಂಡವು ಬರುತ್ತದೆ. ಇವರ ಕವಿತ್ವಶಕ್ತಿ, ಭಾಷಾಶುದ್ಧಿ, ಘಟನೆಗಳ ಕಲ್ಪನೆ ಮತ್ತು ನಿರೂಪಣಾ ವಿಧಾನ, ಛಂದಸ್ಸಿನ ಮೇಲಿನ ಹಿಡಿತ, ಯಕ್ಷಗಾನದ ಕಲಾಭಿಜ್ಞತೆ ಎಲ್ಲವೂ ಉತ್ತಮ ಮಟ್ಟದ್ದಾಗಿದ್ದು ಯಕ್ಷಗಾನ ಸಾಹಿತ್ಯ ಕ್ಷೇತ್ರದಲ್ಲಿ ಉನ್ನತ ಸ್ಥಾನವನ್ನುಪಡೆದಿವೆ. ಅತಿಕಾಯ ಕಾಳಗ, ಧ್ರುವಚರಿತ್ರೆ, ಇಂದ್ರಜಿತು ಕಾಳಗ, ಬಿಲ್ಲಹಬ್ಬ, ಕಂಸವಧೆ, ದ್ರೌಪದಿ ಸ್ವಯಂವರ, ದ್ರೌಪದಿ ವಸ್ತ್ರಾಪಹರಣ,

ರತಿಕಲ್ಯಾಣ, ರಾಜಸೂಯ, ಸುಧಾಮ ಚರಿತೆ, ಲವಕುಶರ ಕಾಳಗ ಮೊದಲಾದ ಹಲವು ಪ್ರಚಲಿತ ಯಕ್ಷಗಾನ ಪ್ರಸಂಗಗಳನ್ನು ಹಟ್ಟಿಯಂಗಡಿ ರಾಮಭಟ್ಟರು 19ನೆ ಶತಮಾನದ ಆದಿಭಾಗದಲ್ಲಿ ರಚಿಸಿದ್ದಾರೆ. ಇವರ ಧ್ರುವಚರಿತ್ರೆ ಒಂದು ಅತ್ಯುತ್ತಮ ಯಕ್ಷಗಾನ ಪ್ರಸಂಗ ಕೃತಿ. ಧ್ರುವಚರಿತ್ರೆ ಭಾಗವತದ 4ನೆಯ ಸ್ಕಂಧದ ಆಧಾರದಿಂದ ರಚಿತವಾದ ಕೃತಿ. ಇದು 425 ಪದ್ಯಗಳಿಂದ ಕೂಡಿದೆ. ಇದರ ತಾಳೆಗರಿ ಪ್ರತಿ, 1929ರ ಕಾಗದದ ಹಸ್ತಪ್ರತಿ ಉಡುಪಿ ಜಿಲ್ಲೆಯ ಬೈಂದೂರು ಸಮೀಪದ ಶಿರೂರಿನ ಯಕ್ಷಗಾನ ಕವಿ ಶಿರೂರು ಫಣಿಯಪ್ಪಯ್ಯನವರ ಸಂಗ್ರಹದಲ್ಲಿ ದೊರೆತಿದೆ. ಇದೇ ಕೃತಿಯನ್ನು ಉಡುಪಿಯ ಶ್ರೀಮನ್ಮಧ್ವ ಸಿದ್ದಾಂತ ಗ್ರಂಥಾಲಯದವರು 1951ರಲ್ಲಿ ಪ್ರಕಟಿಸಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಯವರು ಡಾ ಪಾದೇಕಲ್ ವಿಷ್ಣು ಭಟ್ಟರ ಸಂಪಾದಕತ್ವದಲ್ಲಿ 2006ರಲ್ಲಿ ಪ್ರಕಟಿಸಿದ ಯಕ್ಷಗಾನ ಭಾಗವತ ಪ್ರಸಂಗಗಳು ಸಂಪುಟದಲ್ಲಿ ರಾಮಭಟ್ಟರ ಧ್ರುವಚರಿತ್ರೆ ಪ್ರಸಂಗ ಪ್ರಕಟವಾಗಿದೆ.

ಅತಿಕಾಯ ಕಾಳಗ ರಾಮಭಟ್ಟರ ಇನ್ನೊಂದು ಪ್ರಸಿದ್ಧ ಪ್ರಸಂಗ ಕೃತಿ. ಇದನ್ನು ಉಡುಪಿಯ ಶ್ರೀಮನ್ಮಧ್ವ ಸಿದ್ದಾಂತ ಗ್ರಂಥಾಲಯದವರು 1949ರಲ್ಲಿ ಪ್ರಥಮ ಬಾರಿಗೆ 1968ರಲ್ಲಿ ಐದನೆಯ ಬಾರಿಗೆ ಪ್ರಕಟಿಸಿದ್ದಾರೆ. ಕನ್ನಡ ಸಂಸ್ಕೃತಿ ಇಲಾಖೆಯವರು ಕೂಡ ಯಕ್ಷಗಾನ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ವೀರಭದ್ರ ನಾಯಕರ ಅರ್ಥಸಹಿತ ರಾಮಭಟ್ಟರ ಈ ಪ್ರಸಂಗ 1970ರಲ್ಲಿ ಡಿವಿ ಹೊಳ್ಳ ವಿದ್ವಾನ್ ಕುಂದಾಪುರ ಇವರಿಂದ ಪ್ರಕಟಿಸಲ್ಪಟ್ಟಿದೆ. ಶ್ರೀಜಿಕೆ ಭಟ್ಟರು ಇಂಗ್ಲಿಶ್ ಭಾಷೆಯಲ್ಲಿ ರಾಮಭಟ್ಟರ ಅತಿಕಾಯ ಕಾಳಗ ಪ್ರಸಂಗಕ್ಕೆ ಅರ್ಥ ಬರೆದಿದ್ದು ಇದು 2016ರಲ್ಲಿ ಪಣಂಬೂರು ಶ್ರೀರಾಘವ ರಾವ್ ಸಂಸ್ಮರಣಾ ಗ್ರಂಥ ರಾಘವಾಯಣದಲ್ಲಿ ಪ್ರಕಟವಾಗಿದೆ.  ಇವರ ಕಾಲ ನೇಮಿ ಕಾಳಗ ಪ್ರಸಂಗ 1929ರಲ್ಲಿ ಮತ್ತು ದ್ರೌಪದಿ ಸ್ವಯಂವರ ಪ್ರಸಂಗ 1953ರಲ್ಲಿ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ ಉಡುಪಿ ಇವರಿಂದ ಪ್ರಕಟಿಸಲ್ಪಟ್ಟಿದೆ. ರತಿ ಕಲ್ಯಾಣ ಪ್ರಸಂಗ 1926ರಲ್ಲಿ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ ಉಡುಪಿ ಇವರಿಂದ ಶ್ರೀ ನಿತ್ಯಾನಂದ ಗ್ರಂಥಾಲಯ ಮಂಗಳೂರು ಇವರಿಂದ 8ನೇ ಆವೃತ್ತಿ 1979ರಲ್ಲಿ ಮತ್ತು 11ನೆ ಆವತ್ತಿ 1988ರಲ್ಲಿ ಪ್ರಕಟಿಸಲ್ಪಟ್ಟಿದೆ. ಲವಕುಶರ ಕಾಳಗ (ಪಠದಸಂಧಿ) ಹಟ್ಟಿಯಂಗಡಿ ರಾಮಭಟ್ಟರ ವಿಶಿಷ್ಟ ಕೃತಿ. ಇದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಯಕ್ಷಗಾನ ಸಂಪುಟದಲ್ಲಿ ಪ್ರಕಟಿಸಿದ್ದಾರೆ. ಸುಭದ್ರಾ ಕಲ್ಯಾಣ ಮತ್ತು ಶರಸೇತು ಬಂಧನ ಪ್ರಸಂಗ ಪುಸ್ತಕ 1931ರಲ್ಲಿ ದ್ವಿತೀಯ ಆವೃತ್ತಿ 1956ರಲ್ಲಿ 6ನೆ ಆವೃತ್ತಿಯಾಗಿ 1985ರಲ್ಲಿ ಹತ್ತನೆಯ ಆವೃತ್ತಿಯಾಗಿ ಉಡುಪಿಯ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದವರಿಂದ ಪ್ರಕಟಿಸಲ್ಪಟ್ಟಿದೆ. ಡಾ ಪಾದೇಕಲ್ ವಿಷ್ಣು ಭಟ್ಟರು ಹಟ್ಟಿಯಂಗಡಿ ರಾಮಭಟ್ಟರ ಹೆಚ್ಚಿನ ಪ್ರಸಂಗಗಳನ್ನು ಸಂಗ್ರಹಿಸಿ, ಸಂಪಾದಿಸಿ ಸಂಪುಟ ರೂಪದಲ್ಲಿ ಪ್ರಕಟಿಸಿದ್ದಾರೆ. ರಾಮಭಟ್ಟರ ಬಿಲ್ಲಹಬ್ಬ, ಕಂಸವಧೆ ಈವರೆಗೆ ಪ್ರಕಟವಾಗದೆ ಉಳಿದ ಅಪೂರ್ವ ಪ್ರಸಂಗ ಕೃತಿ. ಇದರ ಕಾಗದ ಹಸ್ತಪ್ರತಿ ಶಿರೂರು ಫಣಿಯಪ್ಪಯ್ಯನವರ ಸಂಗ್ರಹದಲ್ಲಿದ್ದು ಅದನ್ನು **ಫಣಿಗಿರಿ ಪ್ರತಿಷ್ಠಾನ** ಶಿರೂರು ಇವರು ಮುಂದಿನ ದಿನಗಳಲ್ಲಿ ಪ್ರಕಟಿಸುವ ಇರಾದೆ ಹೊಂದಿದ್ದಾರೆ. –

***ಉಮೇಶ ಶಿರೂರು ಬೆಂಗಳೂರು 9448353910***

## ಕಲಾ ಕೈಂಕರ್ಯಕ್ಕೆ ಮಾದರಿ – ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ



**ಯ**ಕ್ಷಗಾನ ಕಲೆಯ ಸರ್ವ ವಿಭಾಗಗಳಲ್ಲಿ ಕಾರ್ಯೋನ್ಮುಖವಾಗಿ ಯಕ್ಷಗಾನವನ್ನು ನೀರೆರೆದು ಪೋಷಿಸುತ್ತಿರುವ ಸಂಸ್ಥೆಗಳಲ್ಲಿ ಕಾಸರಗೊಡು ಜಿಲ್ಲೆಯ, ಮಧೂರು ಪಂಚಾಯತ್ ವ್ಯಾಪ್ತಿಯ ಸಿರಿಬಾಗಿಲು ಎಂಬ ಗ್ರಾಮದ, ಸಿರಿಬಾಗಿಲು ವೆಂಕಪ್ಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ ಮುಂಚೂಣಿಯಲ್ಲಿ ನಿಲ್ಲುತ್ತದೆ. ಸಿರಿಬಾಗಿಲು ವೆಂಕಪಯ್ಯನವರು ಗಡಿನಾಡ ಶ್ರೇಷ್ಠ ಕವಿ, ಲೇಖಕ, ವಿಮರ್ಶಕ. ಅವರು ದಿವಂಗತರಾಗಿ ಇಂದಿಗೆ ನಾಲ್ಕು ದಶಕಗಳೇ ಸಂದಿದೆ. ಅವರ ನೆನಪಿನಲ್ಲಿ ಸಿರಿಬಾಗಿಲು ವೆಂಕಪಯ್ಯ ಸಾಂಸ್ಕೃತಿಕ ಪ್ರತಿಷ್ಠಾನ 2013ರಲ್ಲಿ ಸ್ಥಾಪನೆಯಾಗಿದೆ.  ಯಕ್ಷಗಾನೀಯ, ಸಾಂಸ್ಕೃತಿಕ, ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಸಂಬಂದಿಸಿದ ಹಲಾವಾರು ಅಧ್ಯಯನ ಯೋಗ್ಯ ಕಾರ್ಯಕ್ರಮಗಳನ್ನು ಕರ್ನಾಟಕ, ಕೇರಳ ಇನ್ನುಳಿದಡೆ ನಡೆಸಿ ಯಶಸ್ವಿಯಾಗಿದೆ, ಈ ಸಂಸ್ಥೆಯು ಯಕ್ಷಗಾನ ಬಯಲಾಟದಲ್ಲಿ ಇಂದು ಮರೆಯಾಗುತ್ತಿರುವ ಅನೇಕ ರಂಗ ಕ್ರಮಗಳನ್ನು ಉಳಿಸುವ, ಸಾಂಪ್ರದಾಯಿಕ ಸ್ವರೂಪದಲ್ಲಿ ಪ್ರದರ್ಶನಗಳನ್ನು ಆಯೋಜಿಸುವ 'ರಂಗ ಪ್ರಸಂಗ', ಯಕ್ಷಗಾನ ಪ್ರಸಂಗ ಕವಿಗಳ ಪರಿಚಯವನ್ನು, ಸಾಹಿತ್ಯ ಸಂಪನ್ನತೆಯನ್ನು, ಛಂದೋ ವೈವಿಧ್ಯವನ್ನು ಜನರಿಗೆ ಮುಟ್ಟಿಸುವುದಕ್ಕಾಗಿ 'ಯಕ್ಷ ಕಾವ್ಯಾಂತರಂಗ', ತಾಳಮದ್ದಲೆಯ ಆಶು ವೈಶಿಷ್ಟ್ಯ  ಹಾಗೂ ಅರ್ಥಗಾರಿಕೆಯ ಸತ್ವವನ್ನು ಮನಗಾಣಿಸುವ 'ಅರ್ಥಾಂತರಂಗ' ಎಂಬ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದೆ. ಸಂಸ್ಥೆಯ ಸೇವೆಗಳನ್ನು ಪರಿಗಣಿಸಿ ದ.ಕ.ಜಿಲ್ಲಾ ಸಾಹಿತ್ಯ ಪರಿಷತ್ ನಿಂದ "ಕನ್ನಡ ಸಿರಿ" ಪ್ರಶಸ್ತಿ ಲಭಿಸಿರುತ್ತದೆ. ಕೊರೊನಾ ಯಕ್ಷ ಜಾಗೃತಿ ಕಾರ್ಯಕ್ರಮಕ್ಕೆ WHO ಮಹಾ ನಿರ್ದೇಶಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಂಸ್ಥೆಯ ಮುಂದಿನ ಯೋಜನೆಯಂತೆ "ಸಿರಿಬಾಗಿಲು ವೆಂಕಪಯ್ಯ ಸಾಂಸ್ಕೃತಿಕ ಭವನ" ನಿರ್ಮಾಣಕ್ಕೆ ಸಂಕಲ್ಪಿಸಿದೆ, ಕಾಸರಗೊಡು ಜಿಲ್ಲೆಯ, ಮಧೂರು ಪಂಚಾಯತ್ ವ್ಯಾಪ್ತಿಯ ಸಿರಿಬಾಗಿಲು ಗ್ರಾಮದಲ್ಲಿ ೨೦ ಸೆಂಟ್ ಜಾಗವನ್ನು ಟ್ರಸ್ಟ್ ಹೊಂದಿದ್ದು, ಈ ಸಾಂಸ್ಕೃತಿಕ ಭವನ ದಲ್ಲಿ ಪುಸ್ತಕ ಭಂಡಾರ, ಮ್ಯೂಸಿಯಂ, ಸಭಾಭವನ, ಅಥಿತಿ ಗೃಹ, ಸ್ಟುಡಿಯೋ ಇನ್ನಿತರ ಯೋಜನೆಗಳನ್ನು ರೂಪಿಸಲಾಗಿದೆ.. ಈಗಾಗಲೇ 90 ಲಕ್ಷಕ್ಕೂ ಮಿಕ್ಕಿದ ಕಾಮಗಾರಿ ನಡೆದಿದೆ. ಈ ಭವನ ಲೋಕಾರ್ಪಣೆಯಾಗಲು ಹಾಗೂ ಈ ಯೋಜನೆಗಳಿಗೆ ಖರ್ಚು ವೆಚ್ಚಗಳು ಅಂದಾಜು ಮೂರು ಕೋಟಿ ರೂಪಾಯಿ ಮೀರಲ್ಲಿದ್ದು ಕಲಾ ಪೋಷಕರಿಂದ ಆರ್ಥಿಕ ಸಹಾಯವನ್ನು ಸಂಸ್ಥೆ ನಿರೀಕ್ಷಿಸುತ್ತಿದೆ. ಈ ಕಲಾಸೇವೆಯಲ್ಲಿ ಕೈಜೋಡಿಸುವವವರು ಈ ಕೆಳಗಿನ ಖಾತೆಗೆ ಧನ ಸಹಾಯ ನೀಡಬಹುದು – **Account name- Shiribagilu venkappayya samskruthika prathistana, Karnataka bank, Kasaragod branch - A/C no---406200100053101, Ifsc -KARB0000406 - Mob -9448344380**